ಬೆಲೆ ರೂ.2.50 WPP No. SK/WPP/UDP/81/2012-2014
D.O.P - 15-12-2013 at Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

**Authorised Distributor For :**
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಮಾರ್ಚ್ 2014

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-14 ಸಂಚಿಕೆ-3 ಪುಟಗಳು-8 Registered Under No.KA/SK/UDP/1260/2012-2014 Dated from 01-01-2012 to 31-12-2014.

### ಶ್ರೀಶಾರದಾ ಮಂಟಪದಲ್ಲಿ ವಿಶಿಷ್ಟ ಕಾರ್ಯಕ್ರಮ

## ಶಿವ ಸಂಗೀತ–ಗಾನ ವೈವಿಧ್ಯ



**"ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಪ್ರೇಕ್ಷಕರ ಕೊರತೆ ಇಲ್ಲ" ಎಂಬ ಮಾತು ಸತ್ಯ. ಇದಕ್ಕೆ ಸಾಕ್ಷಿಯಾದ ಒಂದು ಸಾಂಸ್ಕೃತಿಕ ಕಾರ್ಯಕ್ರಮ ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಶಿವರಾತ್ರಿಯಂದು ನಡೆದ "ಶಿವಸಂಗೀತ–ಗಾನವೈವಿಧ್ಯ" .**

ಉದಯವಾಣಿ ಪತ್ರಿಕೆಯಲ್ಲಿ ನೀಡಿದ ಜಾಹೀರಾತಿನಿಂದ ಪ್ರಭಾವಿತರಾಗಿ ಕಿಕ್ಕಿರಿದು ತುಂಬಿರುವ ಸಭಾಂಗಣದಲ್ಲಿ ನಡೆದ ಸಂಗೀತ ಕಾರ್ಯಕ್ರಮದಲ್ಲಿ ಅನೇಕ ಪ್ರಕಾರಗಳ ಮೇರು ಕಲಾವಿದರು ಪ್ರತಿಯೊಬ್ಬರೂ ಒಂದೊಂದು ಕಛೇರಿ ನಡೆಸಿಕೊಡಲು ಶಕ್ತರಾಗಿದ್ದರೂ ಕೇವಲ ಎರಡೂವರೆ ಗಂಟೆಗಳ ಸೀಮಿತ ಅವಧಿಯಲ್ಲಿ, ಮೂರು ಸುತ್ತುಗಳ ಅನೇಕ ಕವಿಗಳ ರಚನೆಯ ಕೀರ್ತನೆ, ಗೀತೆ, ಭಕ್ತಿಗೀತೆಗಳನ್ನು ಶಿವಾರ್ಪಣ ಮಾಡಿದರು.

ಸಂಜೆ 7 ಗಂಟೆಗೆ ಪ್ರಾರಂಭಗೊಂಡ ಈ ಕಾರ್ಯಕ್ರಮದಲ್ಲಿ ಶ್ರೀ ಪಾಡಿಗಾರು ಲಕ್ಷ್ಮೀನಾರಾಯಣ ಉಪಾಧ್ಯಾಯರು ಹಂಸಧ್ವನಿ ರಾಗದಲ್ಲಿ 'ನಟರಾಜ ನಮೋಸ್ತುತೇ' ಹಾಡಿನೊಂದಿಗೆ ಎರಡನೇ ಸುತ್ತಿನಲ್ಲಿ ಶಿವರಂಜನಿ ರಾಗದಲ್ಲಿ 'ಶಿವ ಶಿವ ಎನ್ನದ ನಾಲಗೆ ಏಕೆ' ಎನ್ನುವ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ವಿದ್ವಾನ್ ಶ್ರೀ ರವಿಕಿರಣ್ ಮಣಿಪಾಲ ಹಿಂದುಸ್ಥಾನಿ ಶೈಲಿಯಲ್ಲಿ ಗೋರಖ್‌ಕಲ್ಯಾಣ್ ರಾಗದಲ್ಲಿ ಹಾಗೂ ಮಾಲ್‌ಕೌಂಸ್ ರಾಗದಲ್ಲಿಶುದ್ಧ ಹಿಂದುಸ್ಥಾನೀ ಶೈಲಿಯ ಶಿವ ಲೀಲಾಮೃತದ ಹಾಡುಗಳನ್ನು ಹಾಡಿ ದಕ್ಷಿಣ ಭಾರತದ ಶ್ರೇಷ್ಠ ಉತ್ತರಾದಿ ಗಾಯಕರೆಂಬುದನ್ನು ಮತ್ತೊಮ್ಮೆ ಪ್ರಸ್ತುತಪಡಿಸಿದರು.

ಉಡುಪಿಯ ಶ್ರೀ ನಾರಾಯಣ ಸರಳಾಯರು ಕರ್ನಾಟಕ ಸಂಗೀತದಲ್ಲಿ ಪುರಂದರದಾಸರ ರಚನೆಯಾದ 'ಶಿವದರುಶನ ನಮಗಾಯಿತು' ಹಂಸಧ್ವನಿ ರಾಗದಲ್ಲಿಯೂ ರೇವತೀ ರಾಗದಲ್ಲಿ ಆನಂದದಾಸರ ರಚನೆಯ 'ಕುಣಿಯುತ ನಲಿಯುತ ಬಾ ಶಂಕರ' ಹಾಡುಗಳು ಶುದ್ಧ ಸಂಗೀತವಾಗಿ ಕೇಳುಗರನ್ನು ಭ್ರಮಾಲೋಕಕ್ಕೆ ತಲುಪಿಸಿತು. ವಿದ್ವಾನ್ ಶ್ರೀ ಸುಧೀರ್ ರಾವ್ ಕೊಡವೂರು ನೃತ್ಯ ಸಂಗೀತವನ್ನು ಪ್ರಸ್ತುತ ಪಡಿಸುತ್ತಾ ಅಮೃತವರ್ಷಿಣಿ ರಾಗದಲ್ಲಿ 'ಪ್ರದೋಷ ಸಮಯದಿ ಪರಶಿವ' ಹಾಗೂ ಸ್ವಾತಿ ತಿರುನಾಳ್ ಮಹಾರಾಜ್ ವಿರಚಿತ ಹಂಸಾನಂದಿ ರಾಗದ 'ಶಂಕರ ಶ್ರೀ ಗಿರಿನಾಥ ಪ್ರಭುಕೀ' ಕೀರ್ತನೆಗಳನ್ನು ಹಾಡಿ ನಡುವೆ ವಯೋಲಿನ್, ತಬಲಾ, ಮೃದಂಗಗಳ ಜುಗಲ್‌ಬಂದಿಯೊಂದಿಗೆ ಎಲ್ಲರನ್ನು ನೃತ್ಯಲೋಕಕ್ಕೆ ಕರೆದೊಯ್ದರು.

ಶ್ರೀ ಚಂದ್ರಶೇಖರ ಕೆದ್ಲಾಯರು ಗುಂಡ್ಮಿ ಚಂದ್ರಶೇಖರ ಐತಾಳರ ರಚನೆಯ

3ನೇ ಪುಟಕ್ಕೆ...

### ಶ್ರೀಶಾರದಾ ಮಂಟಪದಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ

## ಪರೀಕ್ಷಾ ತರಬೇತಿ ಶಿಬಿರ



''ವಿದ್ಯಾರ್ಥಿಗಳಲ್ಲಿ ಅಂಕಗಳಿಕೆಯೊಂದಿಗೆ ವ್ಯಕ್ತಿತ್ವ ವಿಕಸನ ಮಾಹಿತಿಯು ಮುಖ್ಯ. ಎಸ್‌ಎಸ್‌ಎಲ್‌ಸಿ ಪಬ್ಲಿಕ್ ಪರೀಕ್ಷೆಯ ಹೆದರಿಕೆ ಇಲ್ಲವಾಗಬೇಕಾದರೆ ಆತನ ವ್ಯಕ್ತಿತ್ವದಲ್ಲಿ ಬದಲಾವಣೆಯಾಗ ಬೇಕಾದುದೂ ಬಹಳ ಪ್ರಾಮುಖ್ಯ'' ಎಂದು ಬ್ರಹ್ಮಾವರ ಪದವಿ ಪೂರ್ವ ಕಾಲೇಜಿನ ಶಿಕ್ಷಕಿ ಶ್ರೀಮತಿ ಉಷಾರವರು ತಾ.09-03-2014ರಂದು ಉಡುಪಿ ಶಾರದಾ ಮಂಟಪದಲ್ಲಿ ಜರಗಿದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅಭಿಪ್ರಾಯಪಟ್ಟರು.

ತರಬೇತಿ ಶಿಬಿರವನ್ನು ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಶಿಕ್ಷಣ ತರಬೇತಿ ವೇದಿಕೆಯವರು ಸಂಘದ ಸಹಕಾರದೊಂದಿಗೆ ಆಯೋಜಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಾರ್ಥನೆಯನ್ನು ಭಾಗವಹಿಸಿದ್ದ ವಿದ್ಯಾರ್ಥಿಗಳು ಮಾಡಿದರು. ಸಂಚಾಲಕರಾದ ಪ್ರಭಾಕರ ಭಂಡಿಯವರು ಪ್ರಸ್ತಾವನೆಯೊಂದಿಗೆ ಎಲ್ಲರನ್ನು ಸ್ವಾಗತಿಸಿದರು. ಸಂಘದ ಅಧ್ಯಕ್ಷರಾದ ಪ್ರಫುಲ್ಲಚಂದ್ರ ರಾವ್ ಹಾಗೂ ಶಿಕ್ಷಣ ತರಬೇತಿ ವೇದಿಕೆಯ ಅಧ್ಯಕ್ಷ ಡಾ| ರವೀಂದ್ರನಾಥ ರಾವ್ ವಿದ್ಯಾರ್ಥಿಗಳಿಗೆ ಶುಭವನ್ನು ಹಾರೈಸಿದರು. ಕಾರ್ಯದರ್ಶಿ ಅರವಿಂದಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬೆಳಗ್ಗಿನ ತರಬೇತಿ ಕಾರ್ಯಕ್ರಮದಲ್ಲಿ ಮಣಿಪಾಲ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ನಾಗೇಂದ್ರ ಪೈಯವರು ಪರೀಕ್ಷೆಯಲ್ಲಿ ಎದುರಿಸಬೇಕಾದ ಪ್ರಶ್ನೆ ಪತ್ರಿಕೆಯ ಮಾದರಿ ಹಾಗೂ ಭೌತಶಾಸ್ತ್ರ, ರಸಾಯನ ಶಾಸ್ತ್ರದ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ ನೀಡಿದರು. ಮಧ್ಯಾಹ್ನ ಭೋಜನದ ಬಳಿಕ ಮಂಗಳೂರು ವಾಮಂಜೂರಿನ ಗಣಿತ ಶಿಕ್ಷಕಿ ಶ್ರೀಮತಿ ಪ್ರಸನ್ನ ವಿದ್ಯಾರ್ಥಿಗಳಿಗೆ ಗಣಿತ ಬಗ್ಗೆ ಮಾಹಿತಿ ನೀಡಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸುವ ಬಗ್ಗೆ ಉಪಯುಕ್ತ ಮಾಹಿತಿ ನೀಡಿದರು. ನಂತರ ಮಣಿಪುರ ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ನಿವೇದಿತಾ ರವರು ಜೀವಶಾಸ್ತ್ರದ ಬಗ್ಗೆ ತರಬೇತಿಯನ್ನು ನೀಡಿದರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ತಿಳಿಸಿ ಇಂತಹ ಕಾರ್ಯಕ್ರಮಗಳು ನಿರಂತರವಾಗಲಿ ಎಂದು ತಿಳಿಸಿದರು. ಶಿಕ್ಷಣ ತರಬೇತಿ ವೇದಿಕೆಯ ಅಧ್ಯಕ್ಷರಾದ ಡಾ| ರವೀಂದ್ರನಾಥ ರಾವ್ ಹಾಗೂ

3ನೇ ಪುಟಕ್ಕೆ...

## ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರಿಂದ ಉಡುಪಿ ಭೇಟಿ

ಹೆಬ್ಬೂರಿನ ಘನಪುರಿ ಸಂಸ್ಥಾನದ
**ಶ್ರೀ ಕೋದಂಡಾಶ್ರಮ ಮಠದ ಪೀಠಾಧಿಪತಿಗಳಾದ**
**ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರು**

ಪೀಠಾರೋಹಣ–ಪಟ್ಟಾಭಿಷಿಕ್ತರಾದ ಮೇಲೆ ಪ್ರಥಮ ಬಾರಿಗೆ ದಿನಾಂಕ 23-03-2014ರಂದು ಸಂಜೆ 5-30ಕ್ಕೆ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನಕ್ಕೆ ಭೇಟಿ ನೀಡಿ ಅಂದು ಶ್ರೀ ಶಾರದಾ ಮಂಟಪದಲ್ಲಿ ಮೊಕ್ಕಾಂ ಇರುವರು. ಸಮಾಜಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಶ್ರೀಗಳನ್ನು ಸ್ವಾಗತಿಸಿ, ಆಶೀರ್ವಾದ ಪಡೆದು ಮಂತ್ರಾಕ್ಷತೆ ಸ್ವೀಕರಿಸಬೇಕೆಂದು ವಿನಂತಿ.

**–ಅಧ್ಯಕ್ಷರು ಮತ್ತು ಕಾರ್ಯದರ್ಶಿ**
ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ.

**ಕಾರ್ಯಕ್ರಮ ವಿವರ : ತಾ.23-03-2014 ಸಂಜೆ ಗಂಟೆ 5-30ಕ್ಕೆ ಶ್ರೀಗಳ ಆಗಮನ, ದೇವರ ದರ್ಶನ, ಸ್ವಾಗತ, ಸಭಾಕಾರ್ಯಕ್ರಮ, ಪಾದಪೂಜೆ, ಅನುಗ್ರಹ ಭಾಷಣ, ಪ್ರಸಾದ ವಿತರಣೆ, ಭೋಜನ ಪ್ರಸಾದ. ಮರುದಿನ ಶ್ರೀಗಳು ಗಂಟೆ 10ರಿಂದ 11ರ ವರೆಗೆ ಭಕ್ತರಿಂದ ಪಾದಪೂಜೆ ಸ್ವೀಕರಿಸಿ, ಮಧ್ಯಾಹ್ನ 2 ಗಂಟೆಗೆ ನಿರ್ಗಮಿಸುತ್ತಾರೆ.**





## ಶ್ರೀಶಾರದಾ ದೇವಸ್ಥಾನ

**ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 2. ಫೋನ್ : 2520754**

ಪ್ರಿಯರೇ,
ಸ್ವಸ್ತಿ ಶ್ರೀ ಚಾಂದ್ರ, ಜಯ ನಾಮ ಸಂ|ರದ ಚೈತ್ರ ಶುಕ್ಲ ಸಪ್ತಮಿಯಂದು
ತಾ.06-04-2014ನೇ ಆದಿತ್ಯವಾರ ಸಂಜೆ ಗಂಟೆ 5-00ರಿಂದ

**ಪರಿಸರದ ಭಕ್ತಬಾಂಧವರು ಭಕ್ತಿ–ಪ್ರೀತಿಯಿಂದ ಪೂಜಿಸಿಕೊಂಡು ಬರುತ್ತಿರುವ ಶ್ರೀಶಾರದಾ ಪರಮೇಶ್ವರೀ ಸನ್ನಿಧಿಯಲ್ಲಿ ಪ್ರತಿವರ್ಷದಂತೆ**

### ಸಾಮೂಹಿಕ ಶ್ರೀದುರ್ಗಾನಮಸ್ಕಾರ ಪೂಜೆಯು

ನೆರವೇರಲಿದೆ. ಪಾಲ್ಗೊಳ್ಳಲಿರುವ ಭಕ್ತಾದಿಗಳು ಸೇವಾ ರೂಪದಲ್ಲಿ ರೂ.125/-ನ್ನು ನೀಡಿ ಪೂಜೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಅಪರಾಹ್ನ 3ರಿಂದ ದೀಪವಿಟ್ಟು ಮಂಡಲ ರಚನೆ, ಸಂಜೆ 5 ರಿಂದ ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ, ಭಕರು ಹಾಗೂ ಋತ್ವಿಜರಿಂದ ಸಪ್ತಶತಿ ಪಾರಾಯಣ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ, ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ ವಿಧಿಗಳು ನಡೆಯಲಿವೆ.

**– ಆಡಳಿತ ಮಂಡಳಿ**

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

## ಚಿಂತನ

ಕಳೆದ ಒಂದು ವರ್ಷದ ಅವಧಿಯಲ್ಲಿ ಮಂಗಳೂರು ವಿಮಾನ ನಿಲ್ದಾಣದಲ್ಲಿ ಚಿನ್ನ ಕಳ್ಳ ಸಾಗಾಣಿಕೆ ಪ್ರಕರಣಗಳು ವಾರಕ್ಕೆ ಎರಡರಂತೆ ನಡೆದಿವೆಯೋ ಎಂಬಂತೆ ಪತ್ರಿಕೆಯಲ್ಲಿ ಓದಿ ತಿಳಿದಿದ್ದೇವೆ. ಬ್ಯಾಗ್‌ನ ಅಡಿಯಲ್ಲಿ, ಕೈಯ ಗಡಿಯಾರದಲ್ಲಿ, ಸೊಂಟದಲ್ಲಿ, ಕಾಲಿನ ಶೂಗಳಲ್ಲಿ, ತಲೆಯ ಟೋಪಿಯಲ್ಲಿ ನಾನಾ ವಸ್ತುಗಳಲ್ಲಿ ಅವಿತಿಟ್ಟುಕೊಂಡು ಅಲ್ಲದೆ ಒಳ ಉಡುಪು, ಹೊಟ್ಟೆ ಗುದದ್ವಾರಗಳಲ್ಲಿ ಅಡಗಿಸಿ ಚಿನ್ನ ಆಭರಣ, ಚಿನ್ನಗಟ್ಟಿ, ಬಿಸ್ಕತ್ತು ಮೊದಲಾದುವುಗಳನ್ನು ತಂದಿರುವಬಗ್ಗೆ ಸಾಕಷ್ಟು ಬಲ್ಲೆವು. ಒಮ್ಮೆ ಸಿಕ್ಕಿದ ಈ ಚಿನ್ನವು ಲಕ್ಷಗಟ್ಟಲೆ ಕೆಲವೊಮ್ಮೆ ಕೋಟಿಗಟ್ಟಲೆ ಬೆಲೆಬಾಳುವುದಾಗಿರುವುದೆಂದೂ ತಿಳಿದಿರುತ್ತೇವೆ.

ಇಷ್ಟೊಂದು ಪ್ರಮಾಣದ ಚಿನ್ನ ವಿದೇಶದಿಂದ ಭಾರತಕ್ಕೆ ಕಳ್ಳ ದಾರಿಯಲ್ಲಿ ಬರುವುದು ಎಂದರೆ ಮಾನವನ/ಭಾರತೀಯರ ಹಳದಿ ಲೋಹದ ಮೋಹದ ಬಗ್ಗೆ ಆಶ್ಚರ್ಯ ಪಡಬೇಕಲ್ಲವೇ? ಅಲ್ಲದೆ ಕಳ್ಳತನದಲ್ಲಿ ತರುವ ಈ ಚಿನ್ನವು ಇಲ್ಲಿಯ ತಪಾಸಣಾಧಿಕಾರಿಗಳ ಕಣ್ಣಿಗೆ ಬಿದ್ದು, ಆ ಚಿನ್ನವನ್ನು ಮುಟ್ಟುಗೋಲು ಮಾಡಿಕೊಳ್ಳುವುದೆಂದೂ ನಮಗೆ ತಿಳಿದಿದೆ. ಮಂಗಳೂರು ವಿಮಾನ ನಿಲ್ದಾಣದ ವಿಚಾರ ಮಾತ್ರ ಹೀಗಲ್ಲ. ದೇಶದ ಇತರ ನಿಲ್ದಾಣಗಳಲ್ಲಿಯೂ ಇಂತಹ ಕಳ್ಳಸಾಗಾಣಿಕೆ ನಡೆಯದೇ ಇದ್ದೀತೇ?

ಆದರೆ ನಂತರ ಆ ಚಿನ್ನ ಏನಾಗುತ್ತದೆ? ಸರಕಾರಕ್ಕೆ ಯಾವ ರೂಪದಲ್ಲಿ ಖಜಾನೆ ತುಂಬುತ್ತದೆ? ಯಾವಾಗ ಅದು ಸರಕಾರಿ ಸೊತ್ತು ಆಗುತ್ತದೆ? ಜನ ಸಾಮಾನ್ಯರಿಗೆ ತಿಳಿಯುವುದೇ ಇಲ್ಲ. ಅಲ್ಲದೆ ಸಿಕ್ಕಿ ಬಿದ್ದ ಈ ಆಸಾಮಿಗಳಿಗೆ ಯಾವತರದ ಶಿಕ್ಷೆಯಾಗುವುದು? ಆಗಿರಬಹುದು ಆದರೂ ಬಹಿರಂಗವಾಗುವುದಿಲ್ಲ. ಇಂತಹ ಕಳ್ಳರಿಗೆ ಕ್ರೂರ ಶಿಕ್ಷೆಯಾಗಬೇಕಾದುದು ನ್ಯಾಯವೇ ಆಗಿದೆ. ಅವರಿಗೆ ಸಿಕ್ಕಿದ ಶಿಕ್ಷೆಯ ಬಗ್ಗೆ ದೊಡ್ಡ ಪ್ರಮಾಣದ ಪ್ರಚಾರ ಬೇಕು. ಈ ಬಗ್ಗೆ ಯಾವ ಪತ್ರಿಕೆಯೂ ಏನನ್ನೂ ಪ್ರಕಟಿಸುವುದಿಲ್ಲ.

ಕಳ್ಳ ದಾರಿಯಲ್ಲಿ ಬಂದ ಈ ಚಿನ್ನ ಎಲ್ಲಾ ನೇರ ಸರಕಾರಿ ಖಜಾನೆ ತುಂಬುವುದೋ? ಭಾರತ ದೇಶಾದ್ಯಂತ ಭ್ರಷ್ಟಾಚಾರದಲ್ಲಿ ತೊಡಗಿರುವ ನೂರಾರು ಅಧಿಕಾರಿಗಳು ಈ ಸಿಕ್ಕಿದ ಚಿನ್ನದ ಯೋಗ್ಯ ನಿರ್ವಹಣೆ ಹೇಗೆ ಮಾಡಿಯಾರು? ಈ ಬಗ್ಗೆ ಮುಂದಿನ ದಿನಗಳಲ್ಲಿಯಾದರೂ ಪತ್ರಿಕೆಯಲ್ಲಿ ದೊಡ್ಡ ವಿವರಣೆಗಳು ಬರಬೇಕಾದುದು ಅಗತ್ಯವೆಂದು ತಿಳಿಯೋಣವೇ?

## ಪಂಡಿತ ಎಚ್. ಸುಬ್ರಾಯ ಭಟ್ಟ ಸ್ಮಾರಕ ವೇದ ಪ್ರಚಾರ ಸಮಿತಿ
## ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಪಾವಂಜೆ, ಹಳೆಯಂಗಡಿ- 574146
# ಗಾಯತ್ರೀ ಜಪಯಜ್ಞ

ತುಳುವ ಸಂಸ್ಕೃತಿಯಲ್ಲಿ ಸೇರಿ ಹಿರಿತನವನ್ನು ಮೆರೆದ ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೆ ಭದ್ರವಾದ, ಭವ್ಯವಾದ ಸುಮಾರು 2000 ವರುಷಗಳಿಗಿಂತಲೂ ಹೆಚ್ಚಿನ ಇತಿಹಾಸವಿದೆಯೆಂದು ಬಲ್ಲ ಮೂಲಗಳಿಂದ ತಿಳಿದಿದೆ. ಸ್ಥಾನಿಕ ಬ್ರಾಹ್ಮಣರು ಈ ಪ್ರದೇಶದ ಗ್ರಾಮ ಮುಖ್ಯರೂ, ರಾಜಾದಾಯ ಸಂಗ್ರಾಹಕರೂ, ಭೂಮಾಲಿಕರೂ ಆಗಿದ್ದರು. ತುಳುನಾಡನ್ನು ಆಳಿದ ಆಲುಪ, ಭಂಗ, ಚೌಟ, ಕೆಳದಿಯ ನಾಯಕರ ಕಾಲದಲ್ಲಿ ಕೂಡ ಅರಸರ ಮಂತ್ರಿಗಳಾಗಿ, ಕರಣಿಕರಾಗಿ, ಬೊಕ್ಕಸದ ಅಧಿಕಾರಿಗಳಾಗಿ, ಹರಿಕಾರರಾಗಿ, ದಿವಾನರಾಗಿ ಅತ್ಯುನ್ನತ ಸ್ಥಾನವನ್ನು ಅಲಂಕರಿಸಿದ್ದರು. ಸ್ಥಾನಿಕರಿಗಿದ್ದ ಸ್ಥಾನಾಧ್ಯಕ್ಷ ಅಥವಾ ಸ್ಥಾನಾಧಿಪತಿ ಪದವಿಯು ಅತ್ಯಂತ ಗೌರವಯುತವಾಗಿದ್ದು ಪೂಜನೀಯವಾಗಿತ್ತು. ಸ್ಥಾನಿಕರು ಆಗಿನ ಕಾಲದ ಧಾರ್ಮಿಕ ಮತ್ತು ಆರ್ಥಿಕ ಭದ್ರಶಕ್ತಿಯಾಗಿದ್ದರು. ಹೀಗೆ ಸ್ಥಾನಿಕ ಬ್ರಾಹ್ಮಣ ಸಮಾಜದಲ್ಲಿ ಅನೇಕ ಮಂದಿ ವೇದ ವಿದ್ಯಾಪಾರಂಗತರಾಗಿ, ವೇದ ವೇದಾಂಗ ಪಂಡಿತರಾಗಿ, ಶಾಸ್ತ್ರ ಪುರಾಣ ಕೋವಿದರಾಗಿ, ತಂತ್ರಾಗಮ ವಿದ್ವಾಂಸರಾಗಿ, ಜ್ಯೋತಿಷ್ಕರಾಗಿ, ರಾಜನೀತಿ ಕೋವಿದರಾಗಿ, ಕಲಾವಿದರಾಗಿ, ಧನಿಕರಾಗಿ, ವಿಮಲ ಗುಣಸಂಪನ್ನರಾಗಿ, ಸಕಲ ವಿದ್ಯಾ ವಿಶಾರದರಾಗಿ, ಜ್ಞಾನಿಗಳಾಗಿ, ಮಠಾಧಿಪತಿಗಳಾಗಿ, ಮಹಾಪುರುಷರಾಗಿ ಹುಟ್ಟಿಬಂದು ಭೂಮಿಯಲ್ಲಿ ಬೆಳಗಿದ್ದಾರೆ. ಸ್ಥಾನಿಕ ಬ್ರಾಹ್ಮಣ ಸಮಾಜದ ಈ ಸ್ಥಾನಮಾನಕ್ಕೆ ಗಾಯತ್ರೀ ಅನುಷ್ಠಾನವೇ ಕಾರಣವಾಗಿತ್ತೆಂಬುದು ನಿತ್ಯ ಸತ್ಯ. ಇದೇ ಸಮಾಜದಲ್ಲಿ ಸಂಜನಿಸಿದ ಕರ್ಮಯೋಗಿ, ಶ್ರಮಜೀವಿ, ಮಹಾಪುರುಷ ಹಳೆಯಂಗಡಿ ಸುಬ್ರಾಯ ಭಟ್ಟರ ದೀರ್ಘಕಾಲದ ಹಂಬಲದಂತೆ 2002ನೇ ಇಸವಿಯಲ್ಲಿ ನಮ್ಮ ಸಮಾಜ ಬಾಂಧವರೆಲ್ಲರ ಸಹಕಾರದಿಂದ ಒಂದು ತಿಂಗಳ ಕಾಲ ಗಾಯತ್ರೀ ಯಜ್ಞ ಸಂಪನ್ನಗೊಂಡಿರುವುದು ತಮಗೆ ತಿಳಿದ ವಿಚಾರ. ಗಾಯತ್ರೀ ಯಜ್ಞದ ಪೂರ್ಣಾಹುತಿಯು ಪಾವಂಜೆ ಕ್ಷೇತ್ರದಲ್ಲಿ ನಡೆದ ಪರಿಣಾಮವಾಗಿ ಮಹಾಯಾಗಗಳು ಹಾಗೂ ದೇವಳದ ಸಮಗ್ರ ಅಭಿವೃದ್ಧಿಯಾದುದು ಸರ್ವವಿದಿತ.

ಈ ಹಿಂದಿನ ಗಾಯತ್ರೀ ಯಜ್ಞ ನಡೆದು 12 ವರ್ಷಗಳು ಕಳೆದಿರುವುದರಿಂದ ಇದೀಗ ಎರಡನೇ ಬಾರಿ ಹೆಚ್ಚಿನ ಉತ್ಸಾಹದಿಂದ ನಮ್ಮ ಸಮಾಜದಲ್ಲಿ ಗಾಯತ್ರೀ ಜಪ ಯಜ್ಞ ಆಂದೋಲನ ನಡೆಯಬೇಕಾಗಿದೆ. ಪಂಡಿತ ಸುಬ್ರಾಯ ಭಟ್ಟರು ನಮ್ಮ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಈ ಗಾಯತ್ರೀ ಜಪ ಯಜ್ಞವನ್ನು ಆಗಾಗ ಅಲ್ಲಲ್ಲಿ ನಡೆಸಬೇಕೆಂದು ಹಂಬಲಿಸಿದವರು. ಆ ತ್ಯಾಗ ಮೂರ್ತಿಯ ಅಪೇಕ್ಷೆಯನ್ನು ನೆರವೇರಿಸುವುದರೊಂದಿಗೆ ನಮ್ಮನ್ನು ನಾವೇ ಉದ್ಧರಿಸಿಕೊಳ್ಳುವ ಕಾರ್ಯದಲ್ಲಿ ಸಮಾಜವನ್ನು ತೊಡಗಿಸಲು ಸಮಿತಿಯು ಕಟಿಬದ್ಧವಾಗಿದೆ.

ಇಲ್ಲಿನ ಮೂಲ ನಿವಾಸಿಗಳಾದ ನಾವು ಪುನಃ ಹಿಂದಿನಂತೆಯೇ ಸಮಗ್ರ ಸಮಾಜದ ಮಾರ್ಗದರ್ಶನದ ಸ್ಥಾನವನ್ನು ಅಲಂಕರಿಸಲು ಅಗತ್ಯವಿರುವ ಧೀಃಶಕ್ತಿಯನ್ನು ಪಡೆಯುವರೇ ಸಮಾಜ ಬಾಂಧವರಾದ ತಾವೆಲ್ಲರೂ ಸಹಕರಿಸಿ ಈ ಧರ್ಮಕಾರ್ಯದ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ಆದ್ದರಿಂದ ಇದೀಗ ಆರಂಭಗೊಂಡಿರುವ ಈ ಆಂದೋಲನದಲ್ಲಿ ತಾವು ತಮ್ಮ ಬಂಧುಮಿತ್ರರೊಡನೆ ತ್ರಿಕರಣಪೂರ್ವಕ ತೊಡಗಿಸಿಕೊಂಡು ವೈಯಕ್ತಿಕ ಸಾಧನೆಯೊಂದಿಗೆ ಸಮಾಜದ ಶ್ರೇಯೋಭಿವೃದ್ಧಿಯ ಕಾರ್ಯದಲ್ಲೂ ಭಾಗಿಗಳಾಗಬೇಕೆಂದು ವಿನಂತಿಸುತ್ತೇವೆ.

ಈ ಬಾರಿ ಸೂರ್ಯನು ಉಚ್ಚಸ್ಥಾನದಲ್ಲಿರುವಾಗ, ಅಂದರೆ ಮೇಷ ಮಾಸದಲ್ಲಿ ಏಪ್ರಿಲ್ 15ರಿಂದ ಮೇ 14 ರವರೆಗೆ ನಮ್ಮ ಸಮಾಜಬಾಂಧವರ 120 ಮನೆಗಳಲ್ಲಿ ಯಜ್ಞ ನಡೆಯಬೇಕಾಗಿದೆ. ಅದಕ್ಕೆ ಪೂರ್ವಭಾವಿಯಾಗಿ ಮೂರು ಕೋಟಿಗೂ ಮಿಕ್ಕಿ ಗಾಯತ್ರೀಜಪವಾಗಬೇಕಾಗಿದೆ. ಸಂಸ್ಕಾರ ಸಹಿತವಾಗಿ ಸೂರ್ಯೋಪಾಸನೆಯಿಂದ ಕೂಡಿದ ಗಾಯತ್ರೀ ಅನುಷ್ಠಾನದಿಂದ ಪ್ರತಿಯೊಬ್ಬನೂ ತನ್ನ ಜೀವನದ ಔನ್ನತ್ಯವನ್ನು ಸಾಧಿಸಲು ಸಾಧ್ಯ. ಇದೇ ಬ್ರಹ್ಮತೇಜ, ಬ್ರಹ್ಮಾಸ್ತ್ರ. ಇದನ್ನು ಹೊಂದಿದವನಿಗೆ ಶತ್ರುಭಯವಿಲ್ಲ. ತೀಕ್ಷ್ಣಮತಿತ್ವ, ಸೂಕ್ಷ್ಮಗ್ರಾಹಿತ್ವ, ನಿಪುಣತೆ, ವೇದಜ್ಞಾನ, ನಿಷ್ಕಾಪಟ್ಯಜೀವನ, ಜೀವನಾಶ್ಯಕ ಸಂಪತ್ತು, ಪರಜ್ಞಾನ ಇವುಗಳು ಲಭಿಸುತ್ತವೆ. ಆದ್ದರಿಂದ ತಾವು ತಮ್ಮ ಶಕ್ತತೆಯನ್ನು ಅರಿತು ಗಾಯತ್ರೀ ಅನುಷ್ಠಾನದಲ್ಲಿ ತೊಡಗಬೇಕಾಗಿ ವಿನಂತಿ. ದಿನಕ್ಕೆ ಒಂದು ಸಾವಿರಕ್ಕೆ ಕಡಿಮೆಯಾಗದಷ್ಟು ಗಾಯತ್ರಿ ಜಪಮಾಡಿ ಲೆಕ್ಕ ಇರಿಸಿಕೊಂಡು ಯಜ್ಞ ಆರಂಭಕ್ಕೆ ಮೊದಲು ಮೇಲಿನ ವಿಳಾಸಕ್ಕೆ ತಮ್ಮ ಜಪ ಸಂಖ್ಯೆಯನ್ನು ಕಳಿಸಿಕೊಡಬೇಕಾಗಿ ವಿನಂತಿ.

### ಶ್ರೀ ಗಾಯತ್ರೀ ಜಪ ವಿಧಿ

ನಿತ್ಯ ಪ್ರಾತಃ ಸಂಧ್ಯಾ ನಂತರ ಆಚಮನ, ಪ್ರಾಣಾಯಾಮಾದಿಗಳನ್ನು ಮಾಡಿ ಶ್ರೀ ಗುರುಗಣೇಶ ಪ್ರಾರ್ಥನೆಯನ್ನು ಮಾಡುವುದು
ಶ್ರೀ ಗುರುಭ್ಯೋ ನಮಃ। ಶ್ರೀ ಮಹಾಗಣಪತಯೇ ನಮಃ ॥

**ಸಂಕಲ್ಪ**

ಮಮೋಪಾತ್ತ ಸಮಸ್ತ ದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ ಅಸ್ಮಾಕಂ ಸಮಾಜಬಾಂಧವಾನಾಂ ಶ್ರೇಯೋಭಿವೃದ್ಧ್ಯರ್ಥಂಚ ಕರಿಷ್ಯಮಾಣ
ಶ್ರೀ ಗಾಯತ್ರೀ ಜಪ ಯಜ್ಞಾಂಗತ್ವೇನ ಯಥಾಶಕ್ತಿ ಗಾಯತ್ರೀ ಜಪಮಹಂ ಕರಿಷ್ಯೇ ॥
ಶ್ರೀ ಗಾಯತ್ರೀ ಮಹಾಮಂತ್ರಸ್ಯ । ವಿಶ್ವಾಮಿತ್ರ ಋಷಿಃ। ಸವಿತಾ ದೇವತಾ । ಗಾಯತ್ರೀ ಛಂದಃ। ಯಥಾಶಕ್ತಿ ಗಾಯತ್ರೀ ಜಪೇ ವಿನಿಯೋಗಃ।

**ಕರನ್ಯಾಸಃ**

ಓಂ ತತ್ಸವಿತುರ್ಬ್ರಹ್ಮಾತ್ಮನೇ ಅಂಗುಷ್ಠಾಭ್ಯಾಂ ನಮಃ। ಓಂ ವರೇಣ್ಯಂ ವಿಷ್ಣ್ವಾತ್ಮನೇ ತರ್ಜನೀಭ್ಯಾಂ ನಮಃ।
ಓಂ ಭರ್ಗೋದೇವಸ್ಯ ರುದ್ರಾತ್ಮನೇ ಮಧ್ಯಮಾಭ್ಯಾಂ ನಮಃ। ಓಂ ಧೀಮಹೀಶ್ವರಾತ್ಮನೇ ಅನಾಮಿಕಾಭ್ಯಾಂ ನಮಃ।
ಓಂ ಧಿಯೋ ಯೋ ನಸ್ಸದಾಶಿವಾತ್ಮನೇ ಕನಿಷ್ಠಿಕಾಭ್ಯಾಂ ನಮಃ। ಓಂ ಪ್ರಚೋದಯಾತ್ಸರ್ವಾತ್ಮನೇ ಕರತಲಕರಪೃಷ್ಠಾಭ್ಯಾಂ ನಮಃ ॥

**ಅಂಗನ್ಯಾಸಃ**

ಓಂ ತತ್ಸವಿತುರ್ಬ್ರಹ್ಮಾತ್ಮನೇ ಹೃದಯಾಯ ನಮಃ। ಓಂ ವರೇಣ್ಯಂ ವಿಷ್ಣ್ವಾತ್ಮನೇ ಶಿರಸೇ ಸ್ವಾಹಾ।
ಓಂ ಭರ್ಗೋದೇವಸ್ಯ ರುದ್ರಾತ್ಮನೇ ಶಿಖಾಯೈ ವಷಟ್। ಓಂ ಧೀಮಹೀಶ್ವರಾತ್ಮನೇ ಕವಚಾಯ ಹುಂ।
ಓಂ ಧಿಯೋ ಯೋ ನಸ್ಸದಾಶಿವಾತ್ಮನೇ ನೇತ್ರತ್ರಯಾಯ ವೌಷಟ್। ಓಂ ಪ್ರಚೋದಯಾತ್ ಸರ್ವಾತ್ಮನೇ ಅಸ್ತ್ರಾಯ ಫಟ್ ॥
ಓಂ ಭೂರ್ಭುವಸ್ಸ್ವರೋಂ ॥

**ಧ್ಯಾನಂ**

ಮುಕ್ತಾವಿದ್ರುಮಹೇಮನೀಲಧವಲಚ್ಛಾಯೈರ್ಮುಖೈಸ್ತ್ರೀಕ್ಷಣೈಃ ಯುಕ್ತಾಮಿಂದುಕಲಾನಿಬದ್ಧಮಕುಟಾಂ ತತ್ತ್ವಾರ್ಥವರ್ಣಾತ್ಮಿಕಾಂ।
ಗಾಯತ್ರೀಂ ವರದಾಭಯಾಂಕುಶಕಶಾಶ್ಶುಭ್ರಂ ಕಪಾಲಂ ಗುಣಂ ಶಂಖಂ ಚಕ್ರಮಥಾರವಿಂದಯುಗಲಂ ಹಸ್ತೈರ್ವಹಂತೀಂ ಭಜೇ ॥

**ಆವಾಹನಂ**

ಆಗಚ್ಛ ವರದೇ ದೇವಿ ಜಪೇ ಮೇ ಸನ್ನಿಧೌ ಭವ। ಗಾಯಂತಂ ತ್ರಾಯಸೇ ಯಸ್ಮಾದ್ಗಾಯತ್ರೀ ತ್ವಂ ತತಃ ಸ್ಮೃತಾ ॥
ಮಹಾಮಾತರ್ ಮಹಾಮಾಯೇ ಸರ್ವಶಕ್ತಿಸ್ವರೂಪಿಣಿ। ಚತುರ್ವರ್ಗಸ್ತ್ವಯಿ ನ್ಯಸ್ತಸ್ತಸ್ಮಾನ್ಮೇ ಸಿದ್ಧಿದಾ ಭವ ॥

**ಮುದ್ರಾಃ**

24 ಆರಂಭಿಕ ಮುದ್ರೆಗಳನ್ನು ಶ್ಲೋಕ ಹೇಳುತ್ತಾ ಕ್ರಮವಾಗಿ ಮಾಡುವುದು.

**ಜಪ**

**ಓಂ ತತ್ಸವಿತು ರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ।**
**ಧಿಯೋ ಯೋ ನಃ ಪ್ರಚೋದಯಾತ್**

(ಜಪವನ್ನು ಇಡೀ ದಿವಸ ರಾತ್ರಿ ವಿಶ್ರಾಂತಿಯವರೆಗೆ ಮಾಡುತ್ತಾ ಇರುವುದು)

ವಿ.ಸೂ. : ಜಪವಿಧಿ ಹಾಗೂ ಮಂತ್ರ ಮುದ್ರೆಗಳ ಬಗ್ಗೆ ತರಬೇತಿಯ ಅಗತ್ಯವಿದ್ದರೆ ತಮ್ಮ ಊರುಗಳಲ್ಲಿ ಜಪ ಮಾಡುವವರನ್ನು ಒಂದೆಡೆ ಸೇರಿಸಿ ಒಂದು ದಿನ ಹಾಗೂ ಸಮಯವನ್ನು ಗೊತ್ತು ಮಾಡಿಕೊಂಡು ನಮಗೆ ತಿಳಿಸಿದಲ್ಲಿ ತರಬೇತಿಗೆ ವ್ಯವಸ್ಥೆ ಮಾಡಲಾಗುವುದು

**ಡಾ। ಹರಪ್ರಸಾದ್ ತುದಿಯಡ್ಕ** — ಅಧ್ಯಕ್ಷರು
**ಎಂ. ಶಶೀಂದ್ರ ಕುಮಾರ್** — ಕಾರ್ಯದರ್ಶಿ
**ನಕ್ರೆ ಬಾಲಕೃಷ್ಣ ರಾವ್** — ಸಂಚಾಲಕರು (ಮೊಬೈಲ್ : 9448547997)

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :**
**ಡಾ। ಯಾಜಿ ಎಚ್. ನಿರಂಜನ ಭಟ್,** ‘ಋಷಿಸ್ವರಂ’, ಎಂ.ಜಿ.ಎಂ. ಕಾಲೇಜು ವಸತಿಗೃಹದ ಬಳಿ, ಕುಂಜಿಬೆಟ್ಟು, ಉಡುಪಿ.
ಫೋನ್ : 08258252828 ಮೊಬೈಲ್ : 9480485012
**ಅಮರನಾಥ ಎಚ್.** ಮೊಬೈಲ್ : 9448619498

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಳಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಶ್ರೀ ಪ್ರಫುಲ್ಲಚಂದ್ರರಾವ್ ಉಡುಪಿ, ಶ್ರೀ ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು ಅರವಿಂದ ಕುಮಾರ್ ಮಣಿಪಾಲ

## ವಿಶಿಷ್ಟ ಕಾರ್ಯಕ್ರಮ ಶಿವ ಸಂಗೀತ-ಗಾನ ವೈವಿಧ್ಯ

■...1ನೇ ಪುಟದಿಂದ



'ಚಂದ್ರಶೇಖರನಿಲ್ಲದೆ' ಹಾಡನ್ನು ಶಿವರಂಜನಿ ರಾಗದಲ್ಲಿಯೂ, ಶ್ರೀ ಜವರೇಗೌಡರ ಸಂಗ್ರಹದ ಶಿವನ ಜನಪದ ಗೀತೆಯನ್ನು ಹಾಡಿದಾಗ ಸೇರಿದ ಜನರೂ ಕುಳಿತಲ್ಲೇ ತಾಳ ಹಾಕುತ್ತಿದ್ದುದು ಕಂಡುಬಂತು.

ಬಡಗು ಯಕ್ಷಗಾನ ರಂಗದಲ್ಲಿ ಸಾಕಷ್ಟು ತನ್ನನ್ನು ದುಡಿಸಿಕೊಂಡು ಅನುಭವಿಯಾದ ಶ್ರೀ ಕೆ.ಜೆ.ಗಣೇಶ್ ಕಿದಿಯೂರು ಅವರಿಂದ ಯಕ್ಷ ಪ್ರಸಂಗಗಳಲ್ಲಿ ಶಿವನ ಸ್ತುತಿಯಲ್ಲಿ ಬರುವ ಹಾಡುಗಳನ್ನು ಆರಬೀ ಹಾಗೂ ರಾಗಮಾಲಿಕಾ ರಾಗಗಳಲ್ಲಿ ಹಾಡಿ ರಂಜಿಸಿದರು. ಯಕ್ಷಗಾನ ಪ್ರಸಂಗಕರ್ತರೂ ಭಾಗವತಿಕೆ ಕಲಾವಿದರೂ ಆದ ಶ್ರೀ ಪೃಥ್ವಿರಾಜ್ ಕವತ್ತಾರ್ ತೆಂಕು ಶೈಲಿಯಲ್ಲಿ ಯಕ್ಷಗಾನ ಪೂರ್ವರಂಗದ ಸಭಾಲಕ್ಷಣದಲ್ಲಿ ಅರ್ಧನಾರೀಶ್ವರರ ಕುಣಿತದ ಪದ್ಯವನ್ನು ಹಾಗೂ ಶಿವ-ಪರಮೇಶ್ವರಿಯ ಕುಣಿತದ ಸನ್ನಿವೇಶದ ಹಾಡುಗಳನ್ನು ಶ್ರಾವ್ಯವಾಗಿ ಹಾಡಿದರು.

ಶ್ರೀ ನಾರಾಯಣ ಸರಳಾಯರು ಶ್ರೀ ಶಂಕರಾಚಾರ್ಯ ವಿರಚಿತ ಲಿಂಗಾಷ್ಟಕವನ್ನು ಹಾಡುವಾಗ ಎಲ್ಲಾ ಕಲಾವಿದರೂ ಅದಕ್ಕೆ ಧ್ವನಿಗೂಡುವಂತೆ ಮಾಡಿದರು. ಕೊನೆಗೆ ವಿದ್ವಾನ್ ಶ್ರೀ ರವಿಕಿರಣ್ ಮಣಿಪಾಲ್ ಹಿಂದುಸ್ಥಾನೀ ಭೈರವೀರಾಗದಲ್ಲಿ 'ಶಿವ ಶಿವ ಎನ್ನಿರೋ' ಹಾಡಿಗೆ ಕಲಾವಿದರು ಮಾತ್ರವಲ್ಲದೆ ಕೆಳಗೆ ಕುಳಿತವರ ಬಾಯಿಯಿಂದಲೂ ಶಿವ-ಶಿವ-ಶಿವ-ಶಿವ ಹೇಳಿಸಿ ಅದ್ಭುತ ಲೋಕಕ್ಕೆ ಒಯ್ದರು.

ಪಕ್ಕವಾದ್ಯಗಳಲ್ಲಿ ದಿಗ್ಗಜರೇ ತುಂಬಿಕೊಂಡಿದ್ದು, ಹಾರ್ಮೋನಿಯಂನಲ್ಲಿ ಶ್ರೀ ಶಶಿಕಿರಣ್ ಮಣಿಪಾಲ, ವಯೋಲಿನ್‌ನಲ್ಲಿ ವಿದ್ವಾನ್ ಶ್ರೀ ಪಾಡಿಗಾರು ಶ್ರೀಧರ ಆಚಾರ್ಯ, ಮೃದಂಗದಲ್ಲಿ ಶ್ರೀ ದೇವೇಶ್ ಭಟ್, ತಬಲಾದಲ್ಲಿ ವಿದ್ವಾನ್ ಶ್ರೀ ಮಾಧವಾಚಾರ್ಯ, ಬಡಗು-ಮದ್ದಳೆಯಲ್ಲಿ ಶ್ರೀ ಕೆ.ಜೆ.ಸುಧೀಂದ್ರ, ತೆಂಕು-ಮದ್ದಳೆಯಲ್ಲಿ ಶ್ರೀ ನಕ್ರೆಮೂಲೆ ಗಣೇಶ್ ಭಟ್ ಮೊದಲಾದವರು ತಮ್ಮ ತಮ್ಮ ಪ್ರತಿಭೆಗಳಿಂದ ಕಾರ್ಯಕ್ರಮದ ಶೋಭೆ ಹೆಚ್ಚುವಂತೆ ಮಾಡಿದರು.

ಸುಮಾರು 2ಗಂಟೆಗಳ ಕಾಲ ನಡೆದ ಈ ಕಾರ್ಯಕ್ರಮದಲ್ಲಿ ಒಟ್ಟು ಮೂರು ಸುತ್ತಿನಲ್ಲಿ ಅನೇಕ ಸಂಗೀತ ವೈವಿಧ್ಯಗಳು ದೂರದೂರಿನಿಂದ ಆಗಮಿಸಿದ್ದ ಸಂಗೀತಾಸಕ್ತರನ್ನು ಚಕಿತಗೊಳಿಸಿತು. ವೇದಿಕೆಯಲ್ಲಿರುವ ಕಲಾವಿದರಿಗೆ ಅವಕಾಶ ಕಡಿಮೆ ಎಂದು ಕಂಡರೂ ಆಗಮಿಸಿರುವ ಕಲಾಸಕ್ತರಿಗೆ ಹಲವು ಪ್ರಕಾರದ ಕಾರ್ಯಕ್ರಮವನ್ನು ಒಂದೇ ವೇದಿಕೆಯಲ್ಲಿ ಏಕಕಾಲದಲ್ಲಿ ಕಾಣುವಂತಾದುದು ಸೌಭಾಗ್ಯವೆಂದು ಹೇಳುತ್ತಿದ್ದುದು ಕಂಡುಬಂತು. ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ(ರಿ) ಶಿವರಾತ್ರಿಯ ಸಲುವಾಗಿ ನಡೆಸಿದ ಈ ವಿಶಿಷ್ಟ ಕಾರ್ಯಕ್ರಮದ ಪ್ರಾರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಪ್ರಫುಲ್ಲಚಂದ್ರ ರಾವ್, ಉಪಾಧ್ಯಕ್ಷರಾದ ಶ್ರೀ ವೇಣುಗೋಪಾಲ ರಾವ್, ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್, ಕೋಶಾಧಿಕಾರಿ ಶ್ರೀ ಕೃಷ್ಣಮೂರ್ತಿ ರಾವ್, ಜತೆಕಾರ್ಯದರ್ಶಿ ಶ್ರೀ ಮಂಜುನಾಥ ಹೆಬ್ಬಾರ್ ಮೊದಲಾದವರು ಎಲ್ಲಾ ಕಲಾವಿದರನ್ನು ಶಾಲು, ಹೂ ನೀಡಿ ಗೌರವಿಸಿದರು. ಅಲ್ಲದೆ ಕಾರ್ಯಕ್ರಮದ ಸಂಪೂರ್ಣ ಪ್ರಾಯೋಜಕರಾಗಿದ್ದ ಸಂಘದ ಲೆಕ್ಕ ಪರಿಶೋಧಕರಾದ ಶ್ರೀ ಗಣೇಶ್ ಹೆಬ್ಬಾರ್ ಅಂಬಲಪಾಡಿಯವರ ಈ ಶ್ಲಾಘನೀಯ ಪ್ರಯತ್ನಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಹಿರಿಯ ಕಲಾವಿದರಾದ ಶ್ರೀ ಚಂದ್ರಶೇಖರ ಕೆದ್ಲಾಯರು ಸಂಘದ ವತಿಯಿಂದ ಸನ್ಮಾನಿಸಿದರು.

## ಸ್ಕಿನ್ ಕೇರ್-ಲೇಸರ್ ಸೆಂಟರ್ ಉದ್ಘಾಟನಾ ಸಮಾರಂಭ



ಉಡುಪಿಯ ಬಡಗುಪೇಟೆಯ ನಾನಾಲಾಲ್ ಆರ್ಕೇಡ್‌ನಲ್ಲಿ ಆಧುನಿಕ ತಂತ್ರಜ್ಞಾನದೊಂದಿಗೆ ಸರ್ವ ಸಜ್ಜಿತವಾಗಿ ನವೀನ ಉಪಕರಣಗಳನ್ನೊಳಗೊಂಡ ಸ್ಕಿನ್ ಕೇರ್ – ಲೇಸರ್ ಸೆಂಟರ್ ಕ್ಲಿನಿಕ್‌ನ್ನು ದಿನಾಂಕ 16-02-2014ರ ಸಂಜೆ ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಉದ್ಘಾಟಿಸಿ ಶುಭ ಹಾರೈಸಿದರು. ಮಣಿಪಾಲದ ಕೆಎಂಸಿಯ ಚರ್ಮರೋಗ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ। ಬಾಲಚಂದ್ರನ್ ಮುಖ್ಯ ಅತಿಥಿಗಳಾಗಿದ್ದರು. ಸಮಾರಂಭದಲ್ಲಿ ಶ್ರೀ ಬಿ.ಕೆ.ಸುಬ್ಬರಾವ್ ಸ್ವಾಗತಿಸಿದರು. ಡಾ। ಲೋಕೇಶ್ ವಂದನಾರ್ಪಣೆ ಮಾಡಿದರು ಶ್ರೀಮತಿ ಬಿ.ಕೆ.ಲಕ್ಷ್ಮೀ , ಶ್ರೀಮತೀ ರಮ್ಯಾ ಲೋಕೇಶ್, ಪ್ರಜ್ವಲ್ ಹಾಗೂ ಉಜ್ವಲ್ ಮತ್ತು ಅನೇಕ ಸಮಾಜ ಬಾಂಧವರು ಉಪಸ್ಥಿತರಿದ್ದರು.

ಖ್ಯಾತ ಚರ್ಮ ರೋಗ ತಜ್ಞರಾದ ಡಾ। ಲೋಕೇಶ್ ಉಡುಪಿಯ ಲಲಿತ್ ಆಸ್ಪತ್ರೆಯ ಬಳಿ ತಮ್ಮ ಕ್ಲಿನಿಕ್ ಮೂಲಕ ವೈದ್ಯಕೀಯ ಸೇವೆ ನೀಡುತ್ತಿದ್ದು, ಇದಕ್ಕಾಗಿ ವಿದೇಶದಲ್ಲಿದ್ದು ಸೌಂದರ್ಯವರ್ಧಕ ಚಿಕಿತ್ಸೆಗೆ ಸಂಬಂಧಿಸಿ ವಿಶೇಷ ತರಬೇತಿಯನ್ನೂ ಪಡೆದಿರುತ್ತಾರೆ. ಅಲ್ಲದೆ ಚರ್ಮರೋಗ ಚಿಕಿತ್ಸೆಗೆ ಸಂಬಂಧಿಸಿದಂತೆ ಬೇರೆ ಬೇರೆ ದೇಶಗಳಲ್ಲಿ ಜಾಗತಿಕ ಮಟ್ಟದ ಹಲವು ಸಮ್ಮೇಳನಗಳಲ್ಲಿ ಭಾಗವಹಿಸಿ ತಮ್ಮ ಪ್ರಬಂಧ ಮಂಡನೆ ಮಾಡಿರುತ್ತಾರೆ. ಈ ಎಲ್ಲಾ ಅನುಭವಗಳೊಂದಿಗೆ ಸರ್ವಸಜ್ಜಿತವಾದ ಈ ನೂತನ ಕ್ಲಿನಿಕ್‌ನಲ್ಲಿ ಆಗಮಿಸುವ ಜನರಿಗೆ ಡಾ। ಲೋಕೇಶ್‌ರಿಂದ ಅತ್ಯುತ್ತಮ ಸೇವೆ ಸಿಗುವಂತಾಗಲಿ ಎಂದು ಶ್ರೀ ಶಾರದಾ ಶುಭ ಹಾರೈಕೆ.

### ಶ್ರೀಶಾರದಾ ಮಂಟಪದಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ತರಬೇತಿ ಶಿಬಿರ

■...1ನೇ ಪುಟದಿಂದ

ಸಂಘದ ಕಾರ್ಯದರ್ಶಿ ಅರವಿಂದ ಕುಮಾರ್ ವಿದ್ಯಾರ್ಥಿಗಳಿಗೆ ಪರೀಕ್ಷೆಯು ಸರಳವಾಗಿ ಹೆಚ್ಚಿನ ಅಂಕಗಳು ಲಭಿಸುವಂತಾಗಲಿ ಎಂದು ಶುಭವನ್ನು ಹಾರೈಸಿದರು. ವೇದಿಕೆಯಲ್ಲಿ ಸಂಘದ ಕೋಶಾಧಿಕಾರಿ ಬಿ.ಕೃಷ್ಣಮೂರ್ತಿರಾವ್, ಶಿಕ್ಷಣ ತರಬೇತಿಯ ಸದಸ್ಯೆ ಶ್ರೀಮತಿ ನಿವೇದಿತಾರವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ನಿರೂಪಿಸಿದ ಪ್ರಭಾಕರ ಭಂಡಿಯವರು ಕೊನೆಯಲ್ಲಿ ಧನ್ಯವಾದವನ್ನಿತ್ತರು.

ಸುಮಾರು 20 ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದ್ದು ಈ ಕಾರ್ಯಕ್ರಮಕ್ಕೆ ಸಂಘದ ಉಪಾಧ್ಯಕ್ಷರಾದ ಎಮ್.ಸದಾನಂದ ರಾವ್, ಮಾಜಿ ಕಾರ್ಯದರ್ಶಿ ಹೆರ್ಗ ನಿರಂಜನ್‌ರಾವ್, ಜೊತೆ ಕಾರ್ಯದರ್ಶಿ ಮಟ್ಟು ಕೃಷ್ಣಕುಮಾರ್ ರಾವ್, ನಿರ್ದೇಶಕ ಪ್ರಕಾಶ್‌ರಾವ್ ಕೋಲ್ಪೆ, ಪಿ.ಎಮ್. ನಾಗರಾಜ ಹಿರಿಯಡ್ಕ ಮೊದಲಾದವರು ಭೇಟಿ ನೀಡಿ ಸಂಘಟಕರನ್ನು ಹಾಗೂ ಶಿಬಿರಾರ್ಥಿಗಳನ್ನು ಪ್ರೋತ್ಸಾಹಿಸಿದರು. ಕಾರ್ಯಕ್ರಮವನ್ನು ಸಂಘಟಿಸಲು ಶಿಕ್ಷಣ ತರಬೇತಿ ವೇದಿಕೆಯ ಅಧ್ಯಕ್ಷ ಡಾ। ರವೀಂದ್ರನಾಥ ರಾವ್, ಸಂಚಾಲಕರಾದ ಪ್ರಭಾಕರ ಭಂಡಿ, ಹಾಗೆಯೇ ಪ್ರಕಾಶ್‌ರಾವ್ ಕೋಲ್ಪೆ, ಮಂಜುನಾಥ ಹೆಬ್ಬಾರ್, ಅಜಿತ್‌ರಾವ್ ಸಹಕರಿಸಿದರು.

## ಕಾರ್ಕಳದಲ್ಲಿ ಷಷ್ಠ್ಯಬ್ಧಿ ಸಮಾರಂಭ

ಕಾರ್ಕಳದ ಶ್ರೀ ಶಂಕರ ಪ್ರತಿಷ್ಠಾನ ಕಾರ್ಯದರ್ಶಿ ಶ್ರೀ ಶಿವರಾವ್ ನಕ್ರೆಯವರ ಅರವತ್ತು ಸಾರ್ಥಕ ಸಂವತ್ಸರಗಳನ್ನು ಮುಗಿಸಿದ ಬಗ್ಗೆ ನಕ್ರೆಯ ಅವರ ಸ್ವಗೃಹದಲ್ಲಿ ನಡೆದ ಸಮಾರಂಭದಲ್ಲಿ ಶಾಂತಿ ಹೋಮ ಸಹಿತ ಮಧ್ಯಾಹ್ನ ಅನ್ನ ಸಂತರ್ಪಣೆ ನೆರವೇರಿತು. ಆಗಮಿಸಿದ ಬಂಧುಗಳು ಶ್ರೀ ಶಿವರಾವ್ ಸೀತಾರತ್ನ ದಂಪತಿಗಳಿಗೆ ಶುಭ ಹಾರೈಸಿದರು.

ವರದಿ :- ಶ್ರೀಮತಿ ಸಾವಿತ್ರಿ ಮನೋಹರ್

## ಭಾವಪೂರ್ಣ ಶ್ರದ್ಧಾಂಜಲಿ



ಜನನ : 05-05-1950 ನಿಧನ : 03-03-2014

**ಪಿಲಿಂಜ ರಾಧಾಕೃಷ್ಣ ರಾವ್**

(ನಿವೃತ್ತ ರಿಸರ್ವ್ ಬ್ಯಾಂಕ್ ಅಧಿಕಾರಿ)


ಹೆತ್ತ ತಾಯಿಯ ಕಣ್ಮಣಿಯಾಗಿ, ನಲ್ಮೆಯ ಹಿರಿಯಣ್ಣನಾಗಿ,
ಪ್ರೀತಿಯ ಪತಿಯಾಗಿ, ಜವಾಬ್ದಾರಿಯುತ ತಂದೆಯಾಗಿ,
ವಾತ್ಸಲ್ಯಮಯಿ ದೊಡ್ಡಪ್ಪ, ಸೋದರ ಮಾವನಾಗಿ, ಅಕ್ಕರೆಯ ಅಜ್ಜನಾಗಿ,
ಬಂಧು-ಮಿತ್ರರ ಆಪ್ತನಾಗಿದ್ದು, ಅಕಾಲದಲ್ಲಿ ನಮ್ಮನ್ನಗಲಿದ
ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ
ಎಂದು ಪ್ರಾರ್ಥಿಸುವ,

ಲಕ್ಷ್ಮೀ ಪಿಲಿಂಜ, ಪುತ್ತೂರು (ತಾಯಿ)
ಶ್ರೀಮತಿ ಮೀನಾಕ್ಷಿ ಮತ್ತು ಶ್ರೀ ನಾಗೇಶ್ ರಾವ್ ಪಿ., ಮಂಗಳೂರು
ಶ್ರೀ ತುಲಸೀದಾಸ್ ಪಿಲಿಂಜ ಮತ್ತು ಶ್ರೀಮತಿ ಸಾವಿತ್ರಿ, ಪುತ್ತೂರು
ಶ್ರೀಮತಿ ವಾಗೇಶ್ವರಿ ಮತ್ತು ಶ್ರೀ ಭಾಗ್ಯಚಂದ್ರ ರಾವ್ ಕೆ., ಪಾವಂಜೆ
ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ಮುರಲೀಕೃಷ್ಣ ರಾವ್, ಉಡುಪಿ
ಶ್ರೀ ಮೋಹನ್‌ದಾಸ್ ಪಿಲಿಂಜ ಮತ್ತು ಶ್ರೀಮತಿ ಗಾಯತ್ರಿ, ಪುತ್ತೂರು

ಗೀತಾ ರಾಧಾಕೃಷ್ಣ ರಾವ್, ಮುಂಬೈ (ಪತ್ನಿ)
ಶ್ರೀ ನಿಶಾಂತ್ ಮತ್ತು ಶ್ರೀಮತಿ ವಿಜೇತಾ, ಪೂನಾ
ಶ್ರೀಮತಿ ಸೌಮ್ಯಾ ಮತ್ತು ಶ್ರೀ ಹರಿಪ್ರಸಾದ್, ಕತಾರ್
ಮಾ। ಆದಿತ್ಯ, ಕತಾರ್

ಶ್ರೀ ನಿತಿನ್ ಮತ್ತು ಡಾ। ಭವಾನಿ, ಶ್ರೀಮತಿ ನಿಶಾ ಮತ್ತು ಶ್ರೀ ಶರತ್,
ಭರತ್, ಪ್ರೀತಿಕಾ, ದೀಪಿಕಾ, ಅನೂಪ್, ಸ್ವರೂಪ್, ಗಾನ,
ಮಾ। ನಿವಾನ್, ಬೇಬಿ ನಿವಿಕಾ, ಮಾ। ಸಮನ್ಯು
ಮತ್ತು
ಬಂಧು-ಮಿತ್ರರು.

# ಕನ್ನಡ ಕವಿಕಾವ್ಯ ಪರಿಚಯ-೧೦ : ಭಕ್ತ ಕವಿ ಕನಕದಾಸರು



**- ಹರಿದಾಸ ಮ.ನಾ.ಹೆಬ್ಬಾರ**
**ಎಂ.ಎ., ಬಿ.ಎಡ್.**

## ಕವಿ ಕನಕದಾಸರ ಸಾಹಿತ್ಯ ವ್ಯವಸಾಯ

1. ಕೀರ್ತನೆಗಳು:- ಮಾಧ್ವ ತತ್ವದ . ಭಾಗವತ ಸಂಪ್ರದಾಯದ ಶ್ರೀ ಹರಿಯ ಮೇಲ್ಮೆಯನ್ನು ಸಾರುವ ಕೀರ್ತನೆಗಳ ಸಂಖ್ಯೆಗಳು ನೂರಾರು. ಪುರಂದರ ದಾಸರಂತೆಯೇ ರಾಗ- ತಾಳ-ಲಯ ಬದ್ಧವಾಗಿ ಹಾಡಬಹುದಾದ ಸಂಪ್ರದಾಯ ಪದ್ಧತಿಯ ಪ್ರಸಿದ್ಧ ಕೀರ್ತನೆಗಳನ್ನು ರಚಿಸಿದ್ದಾರೆ. ಕಾಗಿನೆಲೆಯ ಆದಿಕೇಶವ, ಬೇಲೂರು ಚೆನ್ನಕೇಶವ,ತಿರುಪತಿ ತಿಮ್ಮಪ್ಪ . ಉಡುಪಿಯ ಶ್ರೀ ಕೃಷ್ಣ ಹೀಗೆ ವಿಷ್ಣುವಿನ ಹಲವು ರೂಪಗಳನ್ನು ಆರಾಧಿಸುತ್ತಿದ್ದರೂ 'ಶಿವ-ಶಿವ-ಶಿವ ಎನ್ನಿರೋ' ಎಂದು ಈಶ್ವರನನ್ನೂ 'ಭಜರೇ ಹನುಮಂತಂ- ಮಾನಸ-ಭಜರೇ ಹನುಮಂತಂ' ಎಂದು ಮಾರುತಿಯನ್ನೂ ಹಾಡಿ ಹೊಗಳಿದ್ದಾರೆ. 'ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ' ಭಜಿಸಿ ಬದುಕೆಲೋ ಮನುಜ ಮನಮುಟ್ಟಿ ಹರಿಯ' 'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ' ತೊರೆದು ಜೀವಿಸಬಹುದೇ ಹರಿ ನಿನ್ನ ಚರಣಗಳ' ಮುಂತಾದ ಕೀರ್ತನೆಗಳು ತುಂಬಾ ಜನಪ್ರೀಯವಾದುವುಗಳು. 'ಮುತ್ತು ಬಂದಿದೆ ಕೇರಿಗ್ಗೆ ಆದಿ ಕೇಶವನೆಂಬೋ ಆಣಿಯ ಮುತ್ತು' ಎಂದು ವಿಡಂಬನಾತ್ಮಕವಾಗಿ ದೇವನೆ ಅಸ್ತಿತ್ವವನ್ನು ಎಚ್ಚರಿಸಿದ್ದಾರೆ. 'ಆರು ಬದುಕಿದರಯ್ಯ ಹರಿ ನಿನ್ನ ನಂಬಿ' ಎಂದು ನಿಂದಿಸಿ ಹರಿಯನ್ನು ಪರ್ಯಾಯವಾಗಿ ಸ್ತುತಿಸಿದ್ದಾರೆ. 'ಕುಲ ಕುಲ ಕುಲ ಎನ್ನುತಿಹರು' ಎಂದು ಕುಲದ ಕುರಿತಾಗಿ ಜನರನ್ನು ಎಚ್ಚರಿಸಿದರು. 'ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ' ಎಂದು ಬುದ್ಧಿವಾದವನ್ನೂ ಹೇಳಿರುವರು.

ಪುರಂದರ ದಾಸರ ಸಮಕಾಲೀನರಾದ ಇವರು ಅವರಂತೆಯೇ ಕನಾಟಕ ಸಂಗೀತಕ್ಕೆ ಕೊಡುಗೆಯನ್ನು ನೀಡುವ ನೂರಾರು ಅರ್ಥಪೂರ್ಣವಾದ ಕೀರ್ತನೆಗಳನ್ನು ರಚಿಸಿದ್ದಾರೆ. ಇದರಜೊತೆಗೆ ಇಹಲೋಕದಲ್ಲಿ ಮಾನವನ ಅಸ್ತಿತ್ವದ ಬಗ್ಗೆ ವಿಡಂಬನಾತ್ಮಕವಾಗಿ ವಿವರಿಸಿದ್ದಾರೆ. ಒಟ್ಟಿನಲ್ಲಿ ಇವರ ಕೀರ್ತನೆಗಳು ಸಾಮಾಜಿಕ ಕ್ರಾಂತಿಯನ್ನೇ ಉಂಟು ಮಾಡಿವೆ ಎನ್ನ ಬಹುದು. ತನ್ನ ಕೀರ್ತನೆಗಳ ಕೊನೆಯಲ್ಲಿ 'ಕಾಗಿನೆಲೆ ಆದಿಕೇಶವ' ಎಂಬ ಅಂಕಿತದೊಂದಿಗೆ ಮುಕ್ತಾಯಮಾಡುತ್ತಾರೆ. ಇವರ ಎಷ್ಟೋ ಕೀರ್ತನೆಗಳು ಪುರಂದರ ದಾಸರ ಕೀರ್ತನೆಗಳೊಂದಿಗೆ ಹೋಲುತ್ತಿದ್ದು ಕೊನೆಯಲ್ಲಿರುವ ಅಂಕಿತದಿಂದ ಮಾತ್ರ ಇದು ಯಾರ ರಚನೆ ಎಂದು ನಾವು ತಿಳಿದುಕೊಳ್ಳಬೇಕಷ್ಟೇ. ಕೀರ್ತನೆಗಳಲ್ಲದೆ ಇತರ ನಾಲ್ಕೈದು ಕಾವ್ಯ ಕೃತಿಗಳನ್ನು ರಚಿಸಿರುವ ಶ್ರೇಷ್ಟ ಕವಿಗಳೂ ಆಗಿರುವರು.

# 'ನಿಸರ್ಗದ ಸ್ವರ್ಗ-ಸ್ವಿಡ್ಜರ್‌ಲ್ಯಾಂಡ್



**-ಪ್ರಮೋದ್ ಮಾರ್ಪಳ್ಳಿ ಬಿ.ಇ**

ನಿಸರ್ಗದ ಸಹಜ ಸೌಂದರ್ಯಕ್ಕಿಂತ ನೈಜ ಸೌಂದರ್ಯ ಜಗತ್ತಿನಲ್ಲಿ ಯಾವುದೂ ಇಲ್ಲ. ನಿಸರ್ಗದ ಶಕ್ತಿಯೇ ಅಂತಹದು. ಒಂದಕ್ಕಿಂತ ಒಂದು ಪ್ರದೇಶದಲ್ಲಿನ ನೈಸರ್ಗಿಕ ಬೆರಗುಗೊಳಿಸುವಂತಹದು.

ಭೂಮಿಯ ಮೇಲಿನ ಸ್ವರ್ಗವೆಂದು ಖ್ಯಾತಿಗೊಂಡ 'ಸ್ವಿಡ್ಜರ್‌ಲ್ಯಾಂಡ್' ನನ್ನನ್ನು ಕೈ ಬೀಸಿ ಕರೆಯಿತು. ನೋಡುವ ಸೌಭಾಗ್ಯ ಒದಗಿತು.

ನವಂಬರ್ ಮಾಹೆಯಲ್ಲಿ ಸ್ವಿಡ್ಜರ್ ಲ್ಯಾಂಡಿನ ಹವಾಮಾನ 1° ಡಿಗ್ರಿಯಿಂದ -2° ಡಿಗ್ರಿಯವರೆಗೆ ಕೊರೆಯುವ ಚಳಿ, ಮೈ ನಡುಗಿಸುವ ತಂಡಿ, ದೇಹಕ್ಕಿಲ್ಲ ಥರ್ಮಲ್‌ವೇರ್ 'ಹಾಕಿಸಿಕೊಳ್ಳದೇ ಹೊರಬರುವಂತಿಲ್ಲ. ವಿಶೇಷವಾಗಿ ನಾನು ನೋಡಿದ್ದೆ' ವೆವೆ **(vevey)** ಯ ನೈಸರ್ಗಿಕ ತಾಣ. ಅಲ್ಲಿ ಸುಮಾರು ಮೂರು ವಾರ ಕಂಪನಿಯ ಕೆಲಸದೊಂದಿಗೆ ರುದ್ರ ರಮಣೀಯ, ಮನ-ಮೋಹಕ ಚೆಲುವಿನ ಸ್ಮರಣೆಯಲ್ಲಿ ಉಳಿಯುವ ವಿವಿಧ ಸ್ಥಳವನ್ನು ಅನುಭವವನ್ನು.

ಬೆಳಗ್ಗೆ 8-00 ಆದರೂ ಸೂರ್ಯನ ಪ್ರವೇಶವೇ ಆಗಿರುವುದಿಲ್ಲ. ಮಬ್ಬುಗತ್ತಲು! ಮಂದ ಕೊರೆಯುವ ಛಳಿ. ಆದರೂ ಅದೇನೋ ಶಾಂತತೆ ತರುವ ವಾತಾವರಣ. ಹಾಗೆಯೇ ಮಧ್ಯಾಹ್ನ 12 ಗಂಟೆಯಿಂದ ಸುಮಾರು **3** ರಿಂದ **4** ಗಂಟೆಯವರೆಗೆ ಸೂರ್ಯನ ಹಿತಕರ ಬಿಸಿಲು, ಆದರೂ ಒಂದು ರೀತಿಯ ಛಳಿಯೇ ! ಆದೇನೋ ಛಳಿಯಲ್ಲೂ ಏನೋ ಆನಂದ.

ಸಂಜೆ **5** ರ ಮೇಲಂತೂ ಸೂರ್ಯ ನಾಪತ್ತೆಯಾಗಿ, ಕತ್ತಲು ಪ್ರವೇಶಿಸುತ್ತದೆ. ಜೊತೆಗೆ ಛಳಿಯದೇ ಸಾಮ್ರಾಜ್ಯ ರಸ್ತೆಯಲ್ಲಿ ಆಟೋಮ್ಯಾಟಿಕ್ (ಸ್ವಯಂ ಚಾಲಿತ) ಸ್ಟ್ರೀಟ್‌ಲೈಟ್‌ಗಳು ! ವ್ಯಕ್ತಿ ಅಥವಾ ವಾಹನಗಳು ರಸ್ತೆಯಲ್ಲಿ ಚಲಿಸಿದಾಗ ಸ್ಟ್ರೀಟ್‌ಲೈಟ್‌ಗಳು ಬೆಳಕು ನೀಡುತ್ತವೆ. ಯಾರ ಯಾವ ಸಂಚಾರವೂ ಇಲ್ಲದಿದ್ದಾಗ ಆ ಸ್ಟ್ರೀಟ್‌ಲೈಟ್‌ಗಳು ಬೆಳಗುವುದಿಲ್ಲ. ಆಫ್ ಆಗುತ್ತವೆ.

ರೋಡ್‌ಕ್ರಾಸ್ ಮಾಡಬೇಕಾದರೆ ವಾಹನಗಳಿಗೆ ಸಿಗ್ನಲ್ ಇದ್ದಂತೆ ಮನುಷ್ಯರಿಗೆ ಕೂಡ ಸಿಗ್ನಲ್ ಲೈಟ್, ಅಂದ್ರೆ ನಮ್ಮಲ್ಲಿರುವ ಸಿಷ್ಟಂಗಿಂತ ವಿಭಿನ್ನ ನಾವೇ ರೋಡ್ ಕ್ರಾಸ್ ಮಾಡಬೇಕಾದರೆ ಸಿಗ್ನಲ್ ಕಂಬದಲ್ಲಿರುವ ಬಟನ್ ಒತ್ತಿ-ಹಸಿರು ಲೈಟ್ ಬಂದಾಗ ಕ್ರಾಸ್ ಮಾಡಬೇಕಾಗುತ್ತದೆ. ಮತ್ತೊಂದು ವಿಶೇಷವೆಂದರೆ ಇಂತಹ ಸಿಗ್ನಲ್ ಲೈಟ್ ಅಳವಡಿಸದೇ ಇರುವ ಮಾರ್ಗಗಳಲ್ಲಿ ಮನುಷ್ಯರ ಕ್ರಾಸಿಂಗ್‌ಗೆ ಮೊದಲ ಆದ್ಯತೆ. ಅನಂತರವೇ ವಾಹನಗಳು ಚಲಿಸಬೇಕಾಗುತ್ತದೆ.

**vevey** ಯಿಂದ ಬುಲೆಟ್ ಟ್ರೈನ್‌ನಲ್ಲಿ 2 ಗಂಟೆಯಲ್ಲಿ ಪ್ರಯಾಣಿಸಿದಾಗ ಕಂಡದ್ದೆ ಲೂಸಾರನ್ **(Luzern)** ಟ್ರೇನ್‌ನಲ್ಲಿ ಚಲಿಸಿದಾಗ ಕಣ್ಣು ಸೆಲೆಯುವ ಸುಂದರ ರಮ್ಯ ದೃಶ್ಯಗಳು ಹಸಿರಿನ ನಡುವೆ ಕಾಣುವ ಮನೆಗಳು, ಪುಟ್ಟಪುಟ್ಟ ಆಟಿಕೆಯ ಮನೆಗಳಂತೆ ಕಂಡು, ಇದು ಚಿತ್ರವೋ ಅಥವಾ ಪ್ರಕೃತಿಯ ವೈಚಿತ್ರವೋ ಎನಿಸಿ ಮನಸ್ಸು ಮೂಕ ವಿಸ್ಮಿತಗೊಳಿಸಿತು.

ಲೂಸಾರನಲ್ಲಿ ಲೇಕ್‌ನ ಮೇಲೆ ಕಟ್ಟಿದ ಮರದ ಸೇತುವೆ! ಅದರ ಮೇಲೆ ನಡೆದು ಹೋದಾಗ 2 ರ ಬದಿಯಲ್ಲಿ ಜಲದರಾಶಿ ! ಮುಂದೆ ಲೂಸಾರನ ಹಳೆಯ ಪೇಟೆ. ನಾನು ಹೋದಾಗ ಕ್ರಿಸ್‌ಮಸ್‌ನ ಆಗಮನದ ಸಂಭ್ರಮದ ಹಿನ್ನಲೆಯಲ್ಲಿ ಹಬ್ಬದ ನಾನಾತರದ ವಸ್ತುಗಳು, ಆಟಿಕೆಗಳು, ಸಾಂತಾ ಉಡುಗೊರೆಯನ್ನು ನೀಡುವ ದೃಶ್ಯಗಳು ಮೋಹಕವೆನಿಸಿತು.

ಹೇಳಲೇ ಬೇಕಾದ ಮತ್ತೊಂದು ಸಂಗತಿ ಎಂದರೆ 'ಗ್ರೂಯಾರ್ಸ್' **(Gruyeres)** ಇಲ್ಲಿ 15ನೇ ಶತಮಾನದಲ್ಲಿನ ಕೋಟೆ, ರಾಜ ಮನೆತನಕ್ಕೆ ಸಂಬಂಧಪಟ್ಟ ದಿನನಿತ್ಯ ಬಳಸುತ್ತಿದ್ದ ಉಪಕರಣಗಳು, ಪಿರಂಗಿಗಳು, ನಾಣ್ಯಗಳು, ಬೇಟೆಯಾಡಿದ ಪ್ರಾಣಿಗಳು, ಪುಸ್ತಕಗಳು, ಕಲಾಕೃತಿಗಳು, ಸಿಂಹಾಸನ ಹೀಗೆ ಹಲವು ಬಗೆಯ ವಸ್ತುಗಳನ್ನು ವ್ಯವಸ್ಥಿತವಾಗಿ ಒಂದೊಂದು ಕೋಣೆಯಲ್ಲಿ ಇಡಲಾಗಿತ್ತು. ಸ್ವಚ್ಛತೆ ನಿರ್ವಹಣೆ ಮನಸೆಳೆಯಿತು.

ಸ್ವಿಡ್ಜರ್‌ಲ್ಯಾಂಡೇ ಚಾಕ್‌ಲೇಟ್ ಫೇಮಸ್ ಅಲ್ವೇ? ಅಲ್ಲಿರುವ **BROC** (ಬ್ರಾಕಾಚಾಕಲೇಟ್ ಫ್ಯಾಕ್ಟರಿಗೆ ಹೋದಾಗ ಯಾವಾಗಿನಿಂದ ಚಾಕಲೇಟ್ ಮಾಡಲು ಶುರುವಾಯಿತೋ ಅಲ್ಲಿಂದ ಇಲ್ಲಿಯವರೆಗೆ ಚಾಕಲೇಟಿನ ಉತ್ಪತ್ತಿ ಮಾಡುತ್ತಿದ್ದ ಯಂತ್ರಗಳನ್ನು 3D ಶೋನಲ್ಲಿ ನೋಡುವ ಸದಾವಕಾಶ ಸಿಕ್ಕಿತು. 3D ಶೋ ನೋಡಿದ ನಂತರ ಬಗೆಬಗೆಯ ಚಾಕಲೇಟ್ ಪ್ರದರ್ಶನ ಮತ್ತು ಮಾರಾಟವಿತ್ತು. ಖರೀದಿ ಮಾಡುವ ಮುನ್ನ ಚಾಕಲೇಟ್ ಶ್ಯಾಂಪಲ್ ಇಟ್ಟಿರುವುದರಲ್ಲಿ ರುಚಿ ನೋಡಿ ಇಷ್ಟವಾದರೆ ತೆಗೆದುಕೊಳ್ಳಬಹುದಾಗಿತ್ತು. **CHILLON** ಮರೆತಿದ್ದೆ, ಕೋಟಿ, ಇದು ಲೇಕ್‌ನ ಮಧ್ಯ ಇರುವ 12ನೇ ಶತಮಾನದ ಕೋಟಿ ಸ್ವಯಂ ಚಾಲಿತ ಬಸ್‌ನಲ್ಲಿ ನಾವೇ **ATM** ನಂತಿರುವ ಯಂತ್ರದಲ್ಲಿ **CHF** ಹಾಕಿ ಟಿಕೆಟ್ ಪಡೆಯಬೇಕು. ಇಲ್ಲಿ ಕಂಟೆಕ್ಟರ್ ಇರುವುದಿಲ್ಲ



ಇಲ್ಲಿಯೂ ರಾಜ ಮನೆತನದ ದಿನನಿತ್ಯ ಬಳಸುತ್ತಿದ್ದ ವಿವಿಧ ಉಪಕರಣಗಳು ಟ್ರಜರಿಯಂತಿದ್ದ ಪೆಟ್ಟಿಗೆಗಳು!


ಸ್ವಿಡ್ಜರ್‌ಲ್ಯಾಂಡ್‌ನಲ್ಲಿ ನಾವು ದಾರಿಯಲ್ಲಿ ಹೋಗುವಾಗ ಪರಿಚಯ ಇರಲಿ, ಇಲ್ಲದಿರಲಿ ನಮ್ಮೆದುರಿಗೆ ಬಂದವರು '**BONJOURí** ಬೋನ್ಜಾರ್ ಎನ್ನುತ್ತಾರೆ. ಅಂದರೆ ಹಲೋ ಎನ್ನುವ ಅರ್ಥ. ಇದು ಒಬ್ಬರನ್ನು ಇನ್ನೊಬ್ಬರು ಗೌರವಿಸುವ ಪರಿಚಯಿಸುವ ಪರಿ. ಅಲ್ಲದೇ ಇಲ್ಲಿಯ ಜನರಲ್ಲಿ ಸಹಾಯ ನೀಡುವ ಸೌಹಾರ್ಧತೆ ಇರುವುದು ನನ್ನ ಅನುಭವಕ್ಕೆ ಬಂದಿತು.

ಸ್ವಿಡ್ಜರ್‌ಲ್ಯಾಂಡ್ ನೈಸರ್ಗಿಕ ಸೌಂದರ್ಯದೊಂದಿಗೆ, ಸುಸಂಸ್ಕೃತ ಹೊಂದಿದ ತಾಣ. ಸ್ವಚ್ಛತೆ ಇಲ್ಲಿಯ ಜೀವಾಳ, 'ಮನಸ್ಸು' ಸಂತೋಷದಲ್ಲಿ ನೆಮ್ಮದಿಯಲ್ಲಿ ಇರುವಂತೆ ಮಾಡುವ ಶಕ್ತಿ ಇಲ್ಲಿದೆ. ಆದರೆ ನಾನು ಮೂರು ವಾರದಲ್ಲಿ ಕಂಡದ್ದು ಕಡಿಮೆಯೇ. ನೋಡುವ, ನೋಡಬೇಕಾದ ಸ್ಥಳ ಬಹಳಷ್ಟಿದೆ.

ನನ್ನ ಸುಂದರ ಅನುಭವವನ್ನು ನಿಮ್ಮ ಮುಂದೆ ಇಡುತ್ತಿದ್ದಂತೆ ನನ್ನ ದೇಶದ ನೈಸರ್ಗಿಕ ಸೌಂದರ್ಯ,ಬೆಟ್ಟಗುಡ್ಡ, ಜಲಪಾತ, ಹಿಮರಾಶಿ ಯಾವುದೂ ಕಡಿಮೆ ಏನಿಲ್ಲ. ಆದರೆ ನಿಸರ್ಗದ ಸೌಂದರ್ಯ ಎಲ್ಲೆ ಇದ್ದರೂ ಅದನ್ನು ನೋಡುವ, ಮೆಚ್ಚುವ, ಕಣ್ಮನ ತುಂಬಿಸಿಕೊಳ್ಳುವ ಸೌಭಾಗ್ಯವನ್ನು ಕಳೆದುಕೊಳ್ಳಬಾರದು ತಾನೇ?








*Krishna Rao*
Ph : 2520652
Mob. : 9902029048
**KISHAN**
**Studio & Video**
**Indoor Photography & Port Folio Photography, Video & Mixing, Lamination**
MAIN ROAD, MAJOOR & BANTAKAL.


**ಪ್ರೊ : ಸುಧಾಕರ್ ರಾವ್ ಬೆಳ್ಳೆ**



ಶ್ರೀಮಾತಾ ಇಲೆಕ್ಟ್ರಾನಿಕ್ಸ್
ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....
ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

# 2014ರ ಫೆಬ್ರವರಿ ತಿಂಗಳಲ್ಲಿ ಜಗದ್ಗುರುಗಳು ದಕ್ಷಿಣ ಕನ್ನಡ-ಕಾಸರಗೋಡು ಜಿಲ್ಲೆಗಳಲ್ಲಿ ವ್ಯಾಪಕ ಪ್ರವಾಸಗೈದು ವಿವಿಧ ಕಡೆಗಳಲ್ಲಿ ಅನುಗ್ರಹ ಭಾಷಣ ಮಾಡಿದರು






2014ರ ಫೆಬ್ರವರಿ ತಿಂಗಳಲ್ಲಿ ಜಗದ್ಗುರುಗಳು ದಕ್ಷಿಣ ಕನ್ನಡ-ಕಾಸರಗೋಡು ಜಿಲ್ಲೆಗಳಲ್ಲಿ ವ್ಯಾಪಕ ಪ್ರವಾಸಗೈದು ಕಾಂತಮಂಗಲ ಕ್ಷೇತ್ರ, ಸುಳ್ಯ, ಬಳ್ಪಕ್ಷೇತ್ರ, ಮಲ್ಲ, ಆವಳ ಮಠ, ಕುಂಜರಕ್ಕಾನ, ಬಳ್ಳಪದವು, ನಾರಂಪಾಡಿ, ಪಾಯಿಚ್ಚಾಲ್, ಮುಳ್ಳೇರಿಯಾ, ಬದಿಯಡ್ಕ, ಅಗಲ್ಪಾಡಿ, ಪೆರ್ಲ ಮೊದಲಾದ ಸ್ಥಳಗಳಲ್ಲಿ ವಿವಿಧೆಡೆ ಶಿಲಾನ್ಯಾಸ, ಉದ್ಘಾಟನೆ, ಲೋಕಾರ್ಪಣೆಗೈದು ಸೇರಿದ್ದ ಜನಸ್ತೋಮಕ್ಕೆ ಆಶೀರ್ವಚನ ನೀಡಿ ಹರಸಿದರು.



## ಷಷ್ಠ್ಯಬ್ದಪೂರ್ತಿ ಶಾಂತಿ

ಮುಂಬಯಿಯಲ್ಲಿ ವಾಸ್ತವ್ಯದಲ್ಲಿರುವ ಪಡುಬೆಳ್ಳೆ ಶ್ರೀನಿವಾಸ ರಾವ್ ಇವರ ಷಷ್ಠ್ಯಬ್ದಿಪೂರ್ತಿಯ ಶಾಂತಿ ಹೋಮವು ದಿನಾಂಕ 23-02-2014ರಂದು ಕುಂಜಾರು ಶ್ರೀ ದುರ್ಗಾದೇವಿಯ ಸನ್ನಿಧಾನದಲ್ಲಿ ನೆರವೇರಿತು. ಶ್ರೀನಿವಾಸರಾವ್ ದಂಪತಿಗಳ ಬಂಧು ಬಾಂಧವರು ಆಗಮಿಸಿ ಸಮಾರಂಭಕ್ಕೆ ಶುಭಕೋರಿದರು.

## ಚವಲ-ಅಕ್ಷರಾಭ್ಯಾಸ

ಶ್ರೀಮತಿ ವೀಣಾ ಹಾಗೂ ಶ್ರೀ ಸದಾನಂದ ರಾವ್, ಪಡುಬೆಳ್ಳೆ ಇವರ ಪುತ್ರ ಶ್ರವಣ್‌ನ ಚವಲ ಮತ್ತು ಅಕ್ಷರಾಭ್ಯಾಸವನ್ನು ಶ್ರೀ ಸತ್ಯನಾರಾಯಣ ಪೂಜೆಯೊಂದಿಗೆ ದಿನಾಂಕ 05-03-2014ರಂದು ಉಡುಪಿ ಕುಂಜಿಬೆಟ್ಟು ಜ್ಞಾನಮಂದಿರದಲ್ಲಿ ನೆರವೇರಿಸಿದರು.

## ಗೃಹ ಪ್ರವೇಶ

ಪೆರಣಂಕಿಲ ರಂಗನಾಥ್‌ರಾವ್ ಅವರ ಪುತ್ರ ಶ್ರೀಮತಿ ಮತ್ತು ಶ್ರೀ ಕುಮಾರ ಸ್ವಾಮಿ ರಾವ್ ದಂಪತಿಗಳು ಬೆಂಗಳೂರಿನ ಗೊಟ್ಟಿಗೆರೆ ಮಾರಮ್ಮ ದೇವಸ್ಥಾನದ ಬಳಿ ನಿರ್ಮಿಸಿದ ನೂತನ ಗೃಹ "**ಸೃಷ್ಟಿ**" ಇದರ ಪ್ರವೇಶೋತ್ಸವವನ್ನು ದಿನಾಂಕ 20-02-2014ರಂದು ನೆರವೇರಿಸಿದರು.

★★★ ★★★

ಬೆಂಗಳೂರಿನಲ್ಲಿರುವ ಶ್ರೀಮತಿ ಕವಿತಾ ಮತ್ತು ಶ್ರೀ ಮಹಾದೇವ ರಾವ್ ದಂಪತಿಗಳು ಬೆಂಗಳೂರಿನ ವಿನಾಯಕ (ಈಸ್ಟ್) ವಿಶ್ವನೀಡಂ ಎಂಬಲ್ಲಿ ನೂತನವಾಗಿ ನಿರ್ಮಿಸಿರುವ ''**ಅಂಬಾ ಭವಾನಿ ನಿಲಯ**''ದ ಗೃಹ ಪ್ರವೇಶವನ್ನು ತಾ.17-02-2014ರಂದು ನೆರವೇರಿಸಿದರು.

★★★ ★★★

ಶ್ರೀಮತಿ ಸ್ನೇಹಾ ಮತ್ತು ಶ್ರೀ ಕಿರಣ್‌ರಾವ್ ಕೊಡವೂರು ದಂಪತಿಗಳು ಬೆಂಗಳೂರಿನಲ್ಲಿ ನಿರ್ಮಿಸಿದ ನೂತನ ಗೃಹ ಪ್ರವೇಶವನ್ನು ತಾ.10-03-2014ರಂದು ನೆರವೇರಿಸಿದರು.

## ನಿಧನ

### ಸಾವಿತ್ರಿ

ದ್ವಿವೇದಿ ಎಸ್ ಸೀತಾರಾಮ ಶಾಸ್ತ್ರಿ ಪಾವಂಜೆಯವರ ಧರ್ಮಪತ್ನಿ ಸಾವಿತ್ರಿಯವರು (91ವರ್ಷ) ದಿನಾಂಕ 17-02-2014ರರಂದು ವೃದ್ಧಾಪ್ಯದಿಂದ ನಿಧನಹೊಂದಿದರು. ಮೃತರು ಪುತ್ರರಾದ ಡಾ।ಎಸ್.ವಿಜಯಕುಮಾರ್ ಶಾಸ್ತ್ರಿ, ಎಸ್.ಶ್ರೀನಿವಾಸ್ ಶಾಸ್ತ್ರಿ, ಡಾ। ಅಮರನಾಥ ಶಾಸ್ತ್ರಿ ಹಾಗೂ ನಮ್ಮ ಸಮಾಜದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವೆಸ್. ವಾಗೀಶ ಶಾಸ್ತ್ರಿ ಸಹಿತ ಇಬ್ಬರು ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಟಿ. ಕೃಷ್ಣಮೂರ್ತಿ ಶ್ಯಾನುಭಾಗ್

ಉಡುಪಿ ವಿಬುಧಪ್ರಿಯನಗರ ನಿವಾಸಿ ಟಿ. ಕೃಷ್ಣಮೂರ್ತಿ ಶ್ಯಾನುಭಾಗ್ (69 ವರ್ಷ) ದಿನಾಂಕ 3-3-2014ರಂದು ಅಲ್ಪಕಾಲದ ಅಸೌಖ್ಯದಿಂದ ಬೆಂಗಳೂರಿನಲ್ಲಿ ನಿಧನರಾದರು. ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಅಧಿಕಾರಿಯಾಗಿದ್ದು, ನಿವೃತ್ತರಾಗಿದ್ದ ಮೃತರು ಪತ್ನಿ, ಪುತ್ರ ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ನಿರ್ದೇಶಕರೂ, ಶ್ರೀಶಾರದಾ ಪತ್ರಿಕೆಯ ಸಂಪಾದಕರಲ್ಲೊಬ್ಬರಾದ ಶ್ರೀ ಟಿ. ವಿಶ್ವನಾಥ್ ಶ್ಯಾನುಭಾಗ್ ಸಹಿತ ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಪಿಲಿಂಜ ರಾಧಾಕೃಷ್ಣ ರಾವ್

ಮುಂಬೈಯ ವಾಶಿಯಲ್ಲಿ ವಾಸವಾಗಿದ್ದ ಶ್ರೀ ಪಿಲಿಂಜ ರಾಧಾಕೃಷ್ಣ ರಾವ್ (64 ವರ್ಷ) ಇವರು ದಿನಾಂಕ 03-03-2014 ರಂದು ತಮ್ಮ ಸ್ವಗೃಹದಲ್ಲಿ ಹೃದಯಾಘಾತದಿಂದ ನಿಧನ ಹೊಂದಿದರು. ಮೂಲತಃ ಪುತ್ತೂರಿನವರಾದ ಶ್ರೀಯುತರು ಮುಂಬೈನ ರಿಸರ್ವ್ ಬ್ಯಾಂಕಿನ ಅಧಿಕಾರಿಯಾಗಿದ್ದು, ಸ್ವಯಂ ನಿವೃತ್ತಿ ಪಡೆದಿದ್ದರು. ಇವರು ತಮ್ಮ ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಇಬ್ಬರು ಸಹೋದರರು, ಮೂವರು ಸಹೋದರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

★★★ ★★★

### ಅಂಬಾರಾವ್

ದಿವಂಗತ ಇನ್ನಾ ಶ್ರೀನಿವಾಸ ರಾವ್‌ರವರ ಧರ್ಮಪತ್ನಿ ಅಂಬಾರಾವ್ (86 ವರ್ಷ)ರವರು ದಿನಾಂಕ 13-02-2014ರಂದು ಕೇದಿಗೆಯ ತಮ್ಮ ಸಹೋದರಿಯ ಮನೆಯಲ್ಲಿ ವೃದ್ಧಾಪ್ಯದಿಂದ ನಿಧನರಾದರು. ಮಲ್ಪೆ ಸಿಂಡಿಕೇಟ್ ಬ್ಯಾಂಕಿನಲ್ಲಿ ಉದ್ಯೋಗಿಯಾಗಿದ್ದು ನಿವೃತ್ತರಾಗಿದ್ದ ಮೃತರು ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

★★★ ★★★

### ಕೊಡವೂರು ರಾಘವರಾವ್

ಮುಂಬಯಿ ಬಾಂದ್ರದಲ್ಲಿ ವಾಸ್ತವ್ಯದಲ್ಲಿದ್ದ ಕೊಡವೂರು ರಾಘವರಾಯರು (85 ವರ್ಷ) ದಿನಾಂಕ 14-02-2014ರಂದು ಸ್ವಗೃಹದಲ್ಲಿ ನಿಧನರಾದರು. ಕೆನರಾ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿದ್ದ ಮೃತರು ಪತ್ನಿ, ಮೂವರು ಗಂಡುಮಕ್ಕಳು ಸಹಿತ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

★★★ ★★★

### ಕೆ. ವಿದ್ಯಾಶಂಕರ ಉಪಾಧ್ಯಾಯ

ಬೆಂಗಳೂರಿನಲ್ಲಿ ವಾಸ್ತವ್ಯದಲ್ಲಿದ್ದ ಕಟೀಲು ವಿದ್ಯಾಶಂಕರ ಉಪಾಧ್ಯಾಯರು (44 ವರ್ಷ) ದಿನಾಂಕ 25-01-2014ರಂದು ನಿಧನರಾದರು. ಮೃತರು ಪತ್ನಿ, ಇಬ್ಬರು ಗಂಡುಮಕ್ಕಳು ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಎಸ್.ಕೆ.ಸೋಮಸುಂದರ

ಹಾಸನದಲ್ಲಿ ವಾಸ್ತವ್ಯದಲ್ಲಿದ್ದ ಎಸ್.ಕೆ.ಸೋಮಸುಂದರ್‌ರವರು (63 ವರ್ಷ) ಅಲ್ಪಕಾಲದ ಅನಾರೋಗ್ಯದಿಂದ ಸ್ವಗೃಹದಲ್ಲಿ ದಿನಾಂಕ 01-03-2014ರಂದು ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

★★★ ★★★

### ಸರಸ್ವತಿ ಧಾರೇಶ್ವರ್

ಬೈಂದೂರು ನಿವಾಸಿ ರಮೇಶ್ ಎನ್. ಧಾರೇಶ್ವರ ಅವರ ಪತ್ನಿ ಸರಸ್ವತಿ ಧಾರೇಶ್ವರ (62 ವರ್ಷ) ಅಸೌಖ್ಯದಿಂದ ದಿನಾಂಕ 26-02-2014ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

★★★ ★★★

### ಉಷಾರಾವ್ ಉಡುಪಿ

ಶ್ರೀಶಾರದಾ ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದ ಶ್ರೀ ವೈ. ಮೋಹನರಾಯರ ಧರ್ಮಪತ್ನಿ ಉಷಾ ಮೋಹನ್‌ರಾವ್ (54 ವರ್ಷ) ದಿನಾಂಕ 12-03-2014ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಉಡುಪಿ ಸಂತಸಿಸಿಲಿ ಕನ್ನಡ ಮಾಧ್ಯಮ ಹಿ.ಪ್ರಾ.ಶಾಲೆಯಲ್ಲಿ ಅಧ್ಯಾಪಕಿಯಾಗಿದ್ದ ಮೃತರು ತಾಲೂಕಿನಾದ್ಯಂತ ಸಂಗೀತ ಶಿಕ್ಷಕಿ ಎಂದೇ ಪ್ರಖ್ಯಾತರು. ಉಡುಪಿಯ ಶ್ರೀಶಾರದಾ ಮಂಟಪದಲ್ಲಿ ಸಂಘದ ಮಹಿಳಾ ವೇದಿಕೆಯ ಸಂಚಾಲಕರಾಗಿಯೂ ಕೆಲಸ ಮಾಡಿದ್ದ ಇವರು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಂಡಿದ್ದರು. ಮೃತರು ಪತಿ ಮೋಹನ್ ರಾವ್ ಸಹಿತ ಇಬ್ಬರು ಪುತ್ರರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: ''**ಸತ್ಸಂಗದವರಿಂದ ಭಜನೆ**'' ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: ''**ಸೌಂದರ್ಯಲಹರಿ ಪಾರಾಯಣ**'' ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.20-03-2014) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.21-03-2014 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.23-03-2014 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಹರಿಕಥಾ ಕಾರ್ಯಕ್ರಮ

ಹೆಜಮಾಡಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವಾರ್ಷಿಕ ರಥೋತ್ಸವದ ಪ್ರಯುಕ್ತ ದಿನಾಂಕ 01-03-2014 ರಂದು ಸಂಜೆ ಗಿರಿಜಾ ಕಲ್ಯಾಣ ಎಂಬ ಕಥಾಭಾಗದ ಹರಿಕಥಾ ಕಾರ್ಯಕ್ರಮವನ್ನು ಹರಿದಾಸ ಮ.ನಾ. ಹೆಬ್ಬಾರ್ ನಡೆಸಿಕೊಟ್ಟರು. ಕಾರ್ಯಕ್ರಮದ ಪ್ರಾರಂಭದಲ್ಲಿ ಶ್ರೀಯುತ ಜಿ.ಕೆ.ಕೋಲ್ವೆಯವರು ಹರಿದಾಸರನ್ನು, ಪಕ್ಕ ವಾದ್ಯದವರನ್ನು ಪರಿಚಯಿಸಿ ಸ್ವಾಗತಿಸಿದರು. ಕೊನೆಯಲ್ಲಿ ದೇವಳದ ಆಡಳಿತ ಮಂಡಳಿಯ ಸದಸ್ಯರು ಧನ್ಯವಾದ ಅರ್ಪಿಸಿ ಹರಿದಾಸರನ್ನು ಗೌರವಿಸಿದರು.

ವರದಿ : **ಜಿ.ಕೆ.ಕೋಲ್ವೆ**

## ಶ್ರೀಮತಿ ನಿರ್ಮಲಾ ಹರಿಕೃಷ್ಣರವರಿಗೆ ಮೈಸೂರು ವಿಶ್ವ ವಿದ್ಯಾಲಯದಿಂದ ಡಾಕ್ಟರೇಟ್ ಪ್ರದಾನ



ಉಡುಪಿ ವೈಕುಂಠ ಬಾಳಿಗಾ ಕಾನೂನು ಮಹಾ ವಿದ್ಯಾಲಯದಲ್ಲಿ ಅಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ನಿರ್ಮಲಾ ಹರಿಕೃಷ್ಣರವರಿಗೆ ìಜಾಹೀರಾತಿಗೆ ಸಂಬಂಧಿಸಿದಂತೆ ಕಾನೂನಿನ ವ್ಯಾಪ್ತಿ-ಒಂದು ವಿಮರ್ಷಾತ್ಮಕ ಅಧ್ಯಯನî ಎಂಬ ವಿಷಯದ ಮೇಲೆ ಮೈಸೂರಿನ ಮಾನಸ ಗಂಗೋತ್ರಿಯ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರದ ಮುಖ್ಯಸ್ಥರಾದ ಪ್ರೊ. ಎಂ.ಡಿ. ಕೃಷ್ಣರವರ ಮಾರ್ಗದರ್ಶನದಲ್ಲಿ ನಡೆಸಿದ ಸಂಶೋಧನಾ ಪ್ರಭಂದಕ್ಕೆ, ಮೈಸೂರು ವಿಶ್ವ ವಿದ್ಯಾಲಯವು ಪಿ.ಎಚ್.ಡಿ ಪದವಿಯನ್ನು ಕೊಡಮಾಡಿದೆ.

ಮೈಸೂರಿನ ಜೆ.ಎಸ್.ಎಸ್. ಕಾಲೇಜಿನಲ್ಲಿ ಬಿ.ಕಾಮ್ ಮತ್ತು ಎಲ್.ಎಲ್.ಬಿ. ವ್ಯಾಸಂಗ ಮಾಡಿ ನಂತರ ಮಾನಸ ಗಂಗೋತ್ರಿಯಲ್ಲಿ, ಎಲ್.ಎಲ್.ಎಮ್. ಸ್ನಾತ್ಕೋತ್ತರ ಪದವಿ ಗಳಿಸಿದರು. ತಾವು ಕಲಿತ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಲಾರಂಭಿಸಿದಾಗಲೇ ರಾಜ್ಯ ಶಾಸ್ತ್ರದ ಎಮ್.ಎ. ಮಾಡಿದರು.

ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ëಕೌಟುಂಬಿಕ ದೌರ್ಜನ್ಯ ಕಾಯಿದೆî, ಎಸ್.ಡಿ.ಎಮ್. ಕಾಲೇಜ್ ಆಫ್ ಮ್ಯಾನೇಜ್ಮೆಂಟ್‌ನಲ್ಲಿ ëವೈದ್ಯಕೀಯ ನಿರ್ಲಕ್ಷ್ಯî, ಎಸ್.ಡಿ.ಎಂ.ಕಾನೂನು ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಕಾನೂನು ಕಮ್ಮಟದಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಪ್ರಬಂಧವನ್ನು ಮಂಡಿಸಿದ್ದಾರೆ. ಜಿಲ್ಲಾ ಕಾನೂನು ಸೇವಗಳ ಪ್ರಾಧಿಕಾರ ನಡೆಸುವ ಎಲ್ಲಾ ಮಾಹಿತಿ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುತ್ತಿದ್ದಾರೆ.

ಮೂಲತ: ಉಡುಪಿಯ ಕುಕ್ಕಿಕಟ್ಟೆಯವರಾದ ಡಾ। ನಿರ್ಮಲಾ ಹರಿಕೃಷ್ಣ ëಸುಲಗ್ನî ಸಂಪಾದಕರಾದ ಕೆ. ಬೋಜರಾವ್ ಕುಕ್ಕಿಕಟ್ಟೆ ಅವರ ಕಿರಿಯ ಸಹೋದರಿ ಮತ್ತು ಉಡುಪಿಯ ಸಂಸ್ಕೃತ ಕಾಲೇಜಿನ ಗ್ರಂಥಪಾಲಕರಾದ ಅಡೂರು ಹರಿಕೃಷ್ಣರವರ ಪತ್ನಿ ಇವರ ಪುತ್ರ ಕಾರ್ತಿಕೇಯ ಕೃಷ್ಣ ಟಿ.ಎಂ.ಎ.ಪೈ ಇಂಗ್ಲೀಷ್ ಮಾಧ್ಯಮ ಪ್ರೌಢ ಶಾಲೆಯಲ್ಲಿ ಒಂಬತ್ತನೆಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಶ್ರೀಮತಿ ನಿರ್ಮಲಾರವರ ಈ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.



ಕಾರ್ಕಳ ಶಂಕರ ಪ್ರತಿಷ್ಠಾನದ ಕನ್ಯಾಮಣಿಗಳಿಂದ ನೃತ್ಯ ಪ್ರದರ್ಶನ

## ಮಾಂಗಲ್ಯಂ ತಂತುನಾನೇನ ....

ಉಜಿರೆ ಎಸ್.ಡಿ.ಎಮ್. ಕಾಲೇಜಿನ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿರುವ ಪ್ರೊ. ಶಿವರಾವ್ ಮತ್ತು ಜಾಹ್ನವಿಯವರ ಪುತ್ರಿ **ಚೇತನಾ** ಹಾಗೂ ಕಾಸರಗೋಡು ಮೇಲ್ಪರಂಬದ ಕಲ್ನಾಡ್ ನರ್ಸಿಂಗ್ ಹೋಮ್‌ನ ಡಾ.ಸತ್ಯನಾಥ್ ಮತ್ತು ಡಾ. ಗೀತಾ ಇವರ ಪುತ್ರ **ಶಾಶ್ವತ್** ಇವರ ವಿವಾಹವು ದಿನಾಂಕ 09-02-2014ರಂದು ಬೆಳಂಗಡಿಯ ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿ ಕಲಾಭವನದಲ್ಲಿ ನೆರವೇರಿತು.

★★★ ★★★

ನಂಜನಗೂಡು ಶ್ರೀಮತಿ ಮತ್ತು ಶ್ರೀ ಚಂದ್ರ ಶೇಖರರಾಯರ ಪುತ್ರ **ಎನ್.ಸಿ.ವಿನಯ ಕುಮಾರ್** ಹಾಗೂ ಹೆಮ್ಮಾಡಿ ಶ್ರೀಮತಿ ಮತ್ತು ಶ್ರೀ ಎಚ್.ನಾರಾಯಣ ಹೆಬ್ಬಾರರ ಪುತ್ರಿ **ಸುಮಾದೇವಿ** ಇವರ ವಿವಾಹವು ದಿನಾಂಕ 23-02-2014ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಕದ್ರಿ ಮಂಗಳೂರಿನ ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ಕೆ. ನಾಗೇಶ್‌ರಾಯರ ಪುತ್ರ **ಕೆ.ಪ್ರಸಾದ್ ರಾವ್** ಹಾಗೂ ಶ್ರೀಮತಿ ಸರಸ್ವತಿ ಮತ್ತು ಶ್ರೀ ಅಶೋಕ್ ರಾವ್ ಮಟ್ಟು ಇವರ ಪುತ್ರಿ **ಶೃತಿ ಎ. ರಾವ್** ಇವರ ವಿವಾಹವು ದಿನಾಂಕ 09-03-2014ರಂದು ಉಡುಪಿ ಚಿಟ್ಪಾಡಿ ಶ್ರೀ ಶಾರದಾಂಬಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಮತ್ತು ಶ್ರೀ ಬಿ.ವೆಂಕಟೇಶ ವರ್ಣರವರ ಪುತ್ರ **ಪ್ರಾಣೇಶ್** ಹಾಗೂ ಶ್ರೀಮತಿ ಮತ್ತು ಶ್ರೀ ಪಿ.ನಾರಾಯಣ ಹೆಬ್ಬಾರರ ಪುತ್ರಿ **ಪೂರ್ಣಿಮಾ** ಇವರ ವಿವಾಹವು ದಿನಾಂಕ 09-03-2014ರಂದು ಕುಂದಾಪುರ ಕುಂದೇಶ್ವರ ದೇವಸ್ಥಾನದಲ್ಲಿ ನೆರವೇರಿತು.

## ಶುಭ ಜನನ

ಬೆಂಗಳೂರಿನಲ್ಲಿರುವ ಹೊಸ್ಕೋಟೆ ವಿದ್ಯಾಧರ ರಾವ್ ಮತ್ತು ಶ್ರೀಮತಿ ರೂಪಾರಾಣಿ ದಂಪತಿಗಳಿಗೆ ದಿನಾಂಕ 9-2-2014ರಂದು ಗಂಡು ಶಿಶುವಿನ ಜನನ.

## ಬ್ರಹ್ಮೋಪದೇಶ

**ಪ್ರಜ್ವಲ್ ಮತ್ತು ಉಜ್ವಲ್**

ಶ್ರೀಮತಿ ರಮ್ಯಾ ಮತ್ತು ಡಾ। ಲೋಕೇಶ್ ಬಿ.ಕೆ.ಇವರ ಅವಳಿ ಪುತ್ರರಾದ ಪ್ರಜ್ವಲ್ ಮತ್ತು ಉಜ್ವಲ್ ಇವರ ಬ್ರಹ್ಮೋಪದೇಶವು ದಿನಾಂಕ 5-3-2014ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

## ವಿಳಾಸ ಬದಲಾವಣೆ

**K SUDHAKAR RAO**
No.202, Harshavardhan Apartments,
'A' block, Lala Lajpath Roy Road,
Near Sharada Mantap,
Kunjibettu, Udupi -576102.
Tel : 2530905, 9949766745, 9482487387

**RAJASHEKAR**
"Chaithanya Nilaya"
D.No.10-29, Sampige Nagar
Udyavara Tq, Udupi dist.-574118
Mb:9964093404

## ಮೀನ ಮಾಸದ ವಿಶೇಷ ದಿನಗಳು

| | |
|---|---|
| 14-03-2014 | ಮೀನ ಸಂಕ್ರಮಣ |
| 16-03-2014 | ಪೂರ್ಣಿಮಾ |
| 18-03-2014 | ಉತ್ತರಾಭಾದ್ರಾ ನಕ್ಷತ್ರಾರಂಭ |
| 20-03-2014 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ-9.53ಕ್ಕೆ |
| 27-03-2014 | ಸರ್ವೇಕಾದಶೀ |
| 28-03-2014 | ಪ್ರದೋಷಃ |
| 30-03-2014 | ಅಮವಾಸ್ಯಾ |
| 31-03-2014 | ರೇವತೀ ನಕ್ಷತ್ರಾರಂಭ |
| 11-04-2014 | ಸರ್ವೈಕಾದಶೀ |
| 12-04-2014 | ಪ್ರದೋಷಃ |
| 14-04-2014 | ಮೇಷ ಸಂಕ್ರಮಣ, ಅಶ್ವಿನೀ ನಕ್ಷತ್ರಾರಂಭ |

# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ



ಡಾ। ವೈ. ಸುದರ್ಶನ ರಾವ್

**ಪ್ರಶ್ನೆ : ನಮಗೆ ಅನುವಂಶಿಕವಾಗಿ ಬರುವ ಖಾಯಿಲೆಗಳು ಯಾವುವು? ಅವುಗಳನ್ನು ತಡೆಗಟ್ಟುವುದು ಹೇಗೆ?**

**ಉತ್ತರ :** ನಮ್ಮ ನ್ಯೂಕ್ಲಿಯಸ್ಸಿನಲ್ಲಿ ಇಪ್ಪತ್ತಮೂರು ಜೊತೆ ಕ್ರೋಮೋಸೋಮುಗಳಿರುತ್ತವೆಂದು ಈ ಹಿಂದೆ ತಿಳಿಸಿತ್ತಲ್ಲವೇ. ಪ್ರತೀ ಜೊತೆಯಲ್ಲಿ ಒಂದು ಕ್ರೋಮೋಸೋಮು ತಂದೆಯಿಂದ ಹಾಗೂ ಇನ್ನೊಂದು ತಾಯಿಯಿಂದ ಬಂದಿರುವಂತದ್ದು. ಈ ಒಂದು ಜೊತೆಯಲ್ಲಿರುವ ಎರಡೂ ಕ್ರೋಮೊಸೋಮುಗಳಲ್ಲಿ ನೋಡಲು ಒಂದೇ ತರಹದ ಜೀನಗಳಿದ್ದರೂ ಅವುಗಳ ಮೂಲ ಬೇರೆ ಬೇರೆ (ತಂದೆ/ತಾಯಿ) ಆಗಿರುವುದರಿಂದ ಕೆಲವು ವ್ಯತ್ಯಾಸಗಳಿದ್ದೇ ಇರುತ್ತವೆ. ಈ ವ್ಯತ್ಯಾಸಗಳಲ್ಲಿ ಕೆಲವು ದೋಷಪೂರಿತವೂ ಇರಬಹುದು. ನ್ಯೂಕ್ಲಿಯಸ್ಸಿನಲ್ಲಿರುವ ದೋಷಪೂರಿತವಾದ ಜೀನ್ ಗಳಿಂದಾಗಿ ದೇಹದಲ್ಲಿ ಖಾಯಿಲೆಯ ಚಿಹ್ನೆಗಳು ಪ್ರಕಟವಾಗುವ ಕೆಲವು ನಿರ್ದಿಷ್ಟ ಮಾದರಿಗಳನ್ನು ಗುರುತಿಸಿದ್ದಾರೆ. ಕೆಲವು ಅನುವಂಶಿಕ ಖಾಯಿಲೆಗಳಲ್ಲಿ, ಯಾವುದೇ ಒಂದು ಕ್ರೋಮೋಸೋಮುಗಳ ಜೋಡಿಯಲ್ಲಿ ಒಂದು ಜೀನ್ (dominant gene) ದೋಷಪೂರಿತವಾಗಿದ್ದರೆ ಅದರ ಇನ್ನೊಂದು ಜೋಡಿ ಆರೋಗ್ಯವಾಗಿದ್ದರೂ ಕೂಡ ಅದರ ಕೆಲಸ ನಿಭಾಯಿಸಿಕೊಳ್ಳಲು ಅಸಮರ್ಥವಾಗುತ್ತದೆ. ಇದು ಒಂದು ಮಾದರಿಯಾದರೆ ಇನ್ನು ಕೆಲವು ಖಾಯಿಲೆಗಳಲ್ಲಿ ಹೀಗೆ ಜೋಡಿಯಲ್ಲಿ ಯಾವುದಾದರೊಂದು ದೋಷಪೂರಿತ ಜೀನ್(recessive gene) ಇದ್ದರೂ , ಇನ್ನೊಂದು ಕ್ರೋಮೋಸೋಮಿನಲ್ಲಿರುವ ಆರೋಗ್ಯವಂತ ಜೀನ್ ಪರಿಸ್ಥಿತಿಯನ್ನು ನಿಭಾಯಿಸಿಕೊಂಡು ಹೋಗುತ್ತದೆ. ಈ ಸಂದರ್ಭದಲ್ಲಿ ಒಂದು ಜೋಡಿಯ ಎರಡೂ ಕ್ರೋಮೋಸೋಮಿನಲ್ಲಿರುವ ಜೀನಗಳು ದೋಷಪೂರಿತವಾಗಿದ್ದರೆ ಮಾತ್ರ ಖಾಯಿಲೆ ಬರುತ್ತದೆ. ಇನ್ನು ಕೆಲವು ಖಾಯಿಲೆಗಳಲ್ಲಿ ಕೆಲವೊಮ್ಮೆ ದೋಷಪೂರಿತ ಜೀನಗಳು ಇದ್ದರೂ, ಆದರೆ ಈ ಜೀನ್‌ಗಳು ಸಾಮಾನ್ಯ ಪರಿಸ್ಥಿತಿಯಲ್ಲಿ ಸರಿಯಾಗಿಯೇ ಕೆಲಸ ನಿರ್ವಹಿಸುತ್ತಿದ್ದು ಕೆಲವು ಸನ್ನಿವೇಶಗಳಲ್ಲಿ ಮಾತ್ರ ತಮ್ಮ ದೋಷದಿಂದಾಗಿ ಕೆಲಸ ನಿಭಾಯಿಸಲು ಅಸಮರ್ಥವಾಗುತ್ತವೆ. ಇನ್ನು ಕೆಲವು ಖಾಯಿಲೆಗಳಲ್ಲಿ, ಜೀನ್ ದೋಷಪೂರಿತವಲ್ಲವಾಗಿದ್ದರೂ, ಕೆಲವು ಜೀನ್‌ಗಳ ಪ್ರಭೇಧವನ್ನು ಹೊಂದಿದವರಿಗೆ ಆ ಖಾಯಿಲೆ ಬರುವ ಸಾಧ್ಯತೆ ಹೆಚ್ಚಿರುವುದನ್ನು ಪತ್ತೆಹಚ್ಚಲಾಗಿದೆ.

ಹೀಗೆ ಅನುವಂಶಿಕ ಖಾಯಿಲೆಗಳನ್ನು ದೋಷಪೂರಿತ ಜೀನಗಳಿಂದಾಗಿಯೇ ಬರುವ ಖಾಯಿಲೆಗಳು, ದೋಷಪೂರಿತ ಜೀನಗಳು ಹಾಗೂ ಇತರ ಕಾರಣಗಳು ಸೇರಿ ಬರುವ ಖಾಯಿಲೆಗಳು, ಮತ್ತು ಇತರ ಕಾರಣಗಳಿಂದ ಬರುವ ಖಾಯಿಲೆಯಾಗಿದ್ದರೂ ಕೆಲವು ಜೀನ್‌ನ ಪ್ರಭೇಧಗಳು ಇರುವುದಕ್ಕೂ ಈ ಖಾಯಿಲೆಗೂ ಸಂಬಂಧ ಇರುವ ಖಾಯಿಲೆಗಳು ಎಂದು ಮೂರು ವಿಧವಾಗಿ ವಿಂಗಡಿಸಬಹುದು. ಹೆಚ್ಚಿನ ಅನುವಂಶಿಕ ಖಾಯಿಲೆಗಳು ಎರಡನೇ ಹಾಗೂ ಮೂರನೆ ವಿಧಕ್ಕೆ ಸೇರುತ್ತವೆ. ಜೀನ್‌ಗಳ ಬಗ್ಗೆ ಸಂಶೋಧನೆ ನಡೆಸಿದಂತೆ ಹೆಚ್ಚು ಹೆಚ್ಚು ಖಾಯಿಲೆಗಳು ಈ ಪಟ್ಟಿಗೆ ಸೇರುತ್ತಿವೆ. ಉದಾಹರಣೆಗೆ ಹೇಳಬೇಕಾದರೆ ಇತ್ತೀಚೆಗೆ ಮದ್ಯಪಾನದ ವ್ಯಸನಕ್ಕೂ ಕೆಲವು ಜೀನ್‌ಗಳಿಗೂ ಇರುವ ಸಂಬಂಧವನ್ನೂ ಅಷ್ಟುಮಾತ್ರವಲ್ಲದೆ ಕುಡುಕರಲ್ಲೂ ಕೆಲವರಲ್ಲಿ ಮಾತ್ರ ಲಿವರ್‌ಗೆ ಹಾನಿಯಾಗುವುದಕ್ಕೂ ಅವರಲ್ಲಿ ಇನ್ನೊಂದು ಜೀನ್‌ನ ಪ್ರಭೇಧವಿರುವುದಕ್ಕೂ ಸಂಬಂಧ ಪತ್ತೆ ಹಚ್ಚಿದ್ದಾರೆ.

ಮೊದಲನೆಯ ತರಹದ ಅನುವಂಶಿಕ ಖಾಯಿಲೆಗಳಿಗೆ ಉದಾಹರಣೆಗಳೆಂದರೆ ಹೀಮೋಫಿಲಿಯಾ, ಹೀಮೋಲೈಟಿಕ್ ಅನೀಮಿಯಾ, ಪಾಲಿಸಿಸ್ಟಿಕ್ ಕಿಡ್ನಿ ಖಾಯಿಲೆ, ಕೆಲವು ಮದುಳಿನ ಖಾಯಿಲೆಗಳು,ಕೆಲವು ಹೃದಯದ ಕಾಯಿಲೆಗಳು, ತೊನ್ನು ಖಾಯಿಲೆ, ಬಣ್ಣ ಯಾವುದೆಂದು ಗೊತ್ತಾಗದ ಖಾಯಿಲೆ, ರಕ್ತದಲ್ಲಿ ಕೊಲೆಸ್ಟಿರಾಲ್ ಹೆಚ್ಚಾಗುವುದು (ಒಂದು ವಿಧದ್ದು ಮಾತ್ರ) ತಲೆ ಕೂದಲು ಬೋಳಾಗುವುದು, ಮಾರ್ಫನ್ಸ್ ಸಿಂಡ್ರೋಮ್ ಇತ್ಯಾದಿ.

ಎರಡನೆಯ ತರಹದ ಖಾಯಿಲೆಗಳಿಗೆ ಉದಾಹರಣೆಗಳೆಂದರೆ ಡಯಾಬಿಟಿಸ್, ಅಧಿಕ ರಕ್ತದೊತ್ತಡ, ರಕ್ತದಲ್ಲಿ ಕೊಲೆಸ್ಟಿರಾಲ್ ಹೆಚ್ಚಾಗುವುದು, ಬೊಜ್ಜುತನ, ಹೃದಯದ ರಕ್ತನಾಳದ ಖಾಯಿಲೆ, ರಕ್ತದ ಕ್ಯಾನ್ಸರ್, ಸ್ತನದ ಕ್ಯಾನ್ಸರ್, ಕಿಡ್ನಿಯ ಕ್ಯಾನ್ಸರ್ (wilm's tumor), ಅಂಡಾಶಯದ ಕ್ಯಾನ್ಸರ್, ಕಣ್ಣಿನ ಕ್ಯಾನ್ಸರ್ (retinoblastoma) ಗ್ಲಾಕೋಮ, ಮಯೋಪಿಯಾದಂತಹಾ ಕಣ್ಣಿನ ಖಾಯಿಲೆಗಳು, ಥೈರಾಯ್ಡ್ ಗ್ರಂಥಿಯ ಖಾಯಿಲೆಗಳು, ಮಾನಸಿಕ ಖಾಯಿಲೆಗಳು. ಕ್ಯಾನ್ಸರ್ ಖಾಯಿಲೆಗೂ ಅನುವಂಶಿಕತೆಗೂ ಶೇಕಡಾ ತೊಂಬತ್ತರಷ್ಟು ಸಂಬಂಧವಿದೆ.

ಮೂರನೆಯದರ ಪಟ್ಟಿಗೆ ಇನ್ನೂ ಅನೇಕ ಕ್ಯಾನ್ಸರ್ ಖಾಯಿಲೆಗಳು, ಮದುಳಿನ ಖಾಯಿಲೆಗಳು, ಶ್ವಾಸಕೋಶದ ಖಾಯಿಲೆಗಳು, ಕರುಳಿನ ಉರಿಯೂತಗಳು, ಎಲುಬಿನ ಖಾಯಿಲೆಗಳು, ಅನೇಕ ಮೀಣಜೀವಿಗಳಿಂದಾಗುವ ಇನ್‌ಫೆಕ್ಷನ್‌ಗಳು ಹೀಗೆ ನೂರಾರು ಖಾಯಿಲೆಗಳು ಈ ಪಟ್ಟಿಯಲ್ಲಿ ಬರುತ್ತವೆ ಹಾಗೂ ಬರುತ್ತಿವೆ.

ಅನುವಂಶಿಕ ಖಾಯಿಲೆಗಳು ಹುಟ್ಟಿದ ತಕ್ಷಣ ಕಾಣಿಸಿಕೊಳ್ಳಬೇಕೆಂದೇನಿಲ್ಲ, ಕುಟುಂಬದಲ್ಲಿ ಒಬ್ಬರಿಗೆ ಅನುವಂಶಿಕ ಖಾಯಿಲೆ ಇದ್ದಾಕ್ಷಣ ಎಲ್ಲರಿಗೂ ಈ ಖಾಯಿಲೆ ಇರಬೇಕೆಂದಿಲ್ಲ, ಖಾಯಿಲೆ ಇದ್ದವರ ಮಕ್ಕಳಿಗೆ ಈ ಖಾಯಿಲೆ ಬರಲೇಬೇಕು ಎಂದೇನಿಲ್ಲ, ಹಾಗೆಯೇ ಕಾಯಿಲೆ ಇಲ್ಲದವರ ಮಕ್ಕಳಲ್ಲಿ ಈ ಖಾಯಿಲೆ ಕಾಣಿಸಿಕೊಳ್ಳ ಬಾರದೆಂದೇನಿಲ್ಲ. ಅನುವಂಶಿಕ ಖಾಯಿಲೆಗಳು ಪ್ರಕಟವಾಗುವುದಕ್ಕೂ ನಾವು ಜೀವಿಸುವ ಪರಿಸರವು ನಮ್ಮ ದೇಹದ ಮೇಲೆ ಬೀರುವ ಪ್ರಭಾವಕ್ಕೂ ಗಾಢವಾದ ಸಂಬಂಧವಿದೆ.

ಅನುವಂಶಿಕ ಖಾಯಿಲೆಗಳನ್ನು ತಡೆಗಟ್ಟುವುದು ಹೇಗೆ?

ನಾವು ಯಾವ ಜೀನ್‌ಗಳನ್ನು ಪಡೆದು ಹುಟ್ಟುತ್ತೇವೆಂಬುದು ನಮ್ಮ ಹಿಡಿತದಲ್ಲಿರದ ವಿಷಯ. ಆದರೂ ನಮ್ಮ ಕುಟುಂಬದಲ್ಲಿರಬಹುದಾದ ದೋಷಪೂರಿತ ಜೀನಗಳು ನಮಗೆ ಖಾಯಿಲೆಯ ರೂಪದಲ್ಲಿ ಪ್ರಕಟವಾಗುವುದನ್ನು ತಪ್ಪಿಸಲು ಹಾಗೂ ನಮ್ಮ ಮುಂದಿನ ಪೀಳಿಗೆಯು ಈ ಖಾಯಿಲೆಯಿಂದ ನರಳದಂತೆ ಮಾಡಲು ಕೆಲವು ಅಮೂಲ್ಯ ಸಲಹೆಗಳಿವು.

ಕುಟುಂಬದಲ್ಲಿ ಒಬ್ಬರಿಗಿಂತ ಹೆಚ್ಚಿಗೆ ಜನರು ಒಂದೇ ಖಾಯಿಲೆಯಿಂದ ಬಳಲುತ್ತಿದ್ದರೆ ಅಥವ ಯಾರಾದರೊಬ್ಬರು ವಿಶೇಷವಾದ ಖಾಯಿಲೆಯಿಂದ ಬಳಲುತ್ತಿದ್ದರೆ ಆ ಖಾಯಿಲೆ ಅನುವಂಶಿಕವೇ ಎಂದು ವೈದ್ಯರಲ್ಲಿ ಕೇಳಿ ತಿಳಿದುಕೊಳ್ಳಿ. ಒಂದು ವೇಳೆ ಅನುವಂಶಿಕವಾಗಿದ್ದರೆ ಅದು ಮೇಲೆ ವಿಂಗಡಿಸಿದ ಮೂರು ವಿಧದಲ್ಲಿ ಯಾವ ವಿಧಕ್ಕೆ ಸೇರುವಂತಾದ್ದು ಎಂದೂ ತಿಳಿದುಕೊಳ್ಳಿ. ಹಾಗೆಯೇ ಈ ಖಾಯಿಲೆ ಅನುವಂಶಿಕ ಮಾತ್ರವಲ್ಲದೇ ಬೇರೆ ಯಾವ ಪೂರಕ ಕಾರಣಗಳಿಂದ ಪ್ರಕಟವಾಗುತ್ತದೆ ಎಂದೂ ತಿಳಿದುಕೊಳ್ಳಿ. ಕುಟುಂಬದ ಇತರ ಸದಸ್ಯರು ಈ ಪೂರಕ ಕಾರಣಗಳನ್ನು ಸರಿಪಡಿಸಿಕೊಂಡರೆ ಅವರಲ್ಲಿ ಈ ಖಾಯಿಲೆ ಪ್ರಕಟವಾಗುವುದನ್ನು ತಡೆಗಟ್ಟಬಹುದು ಅಥವಾ ಮುಂದೆ ಹಾಕಬಹುದು (ಎರಡನೇ ವಿಧದ ಖಾಯಿಲೆಗಳು) ಅಥವಾ ಕನಿಷ್ಟಪಕ್ಷ ತಮ್ಮಲ್ಲಿ ಈ ಖಾಯಿಲೆ ಇದೆಯೇ ಎಂದು ತಪಾಸಣೆಗೊಳಗಾಗುವ ಮೂಲಕ ಖಾಯಿಲೆಯನ್ನು ಇದ್ದರೆ ಆದಷ್ಟು ಮೊದಲೇ ಪತ್ತೆ ಹಚ್ಚಬಹುದು (ಎರಡು ಹಾಗೂ ಮೂರನೇ ವಿಧದ ಖಾಯಿಲೆಗಳು)

ಅನುವಂಶಿಕ ಖಾಯಿಲೆ ಇರುವ ಕುಟುಂಬದವರು ಸ್ವತಃ ಆರೋಗ್ಯವಾಗಿದ್ದರೂ ಕುಟುಂಬದ (ರಕ್ತ ಸಂಬಂಧಿಗಳ) ಒಳಗೆ ಮದುವೆಯಾಗಬಾರದು. ಹಾಗೆಯೇ ಅದೇ ಖಾಯಿಲೆ ಇರುವ ಬೇರೆ ಕುಟುಂಬದವರನ್ನೂ ಮದುವೆಯಾಗಬಾರದು. ಯಾವುದೇ ಅನುವಂಶಿಕ ಖಾಯಿಲೆ ಇರದಿದ್ದರೂ ಕೂಡ ರಕ್ತಸಂಬಂಧಿಗಳೊಳಗೆ ವಿವಾಹ ಒಳ್ಳೆಯದಲ್ಲ ಯಾಕೆಂದರೆ ಯಾವುದಾದರು ಇಲ್ಲಿಯವರೆಗೆ ಪ್ರಕಟಗೊಳ್ಳದಿದ್ದ ಅಥವಾ ಪ್ರಕಟಗೊಂಡಿದ್ದರೂ ಗುರುತಿಸದೇ/ವೈದ್ಯರಲ್ಲಿ ಚಿಕಿತ್ಸೆ ಪಡೆಯದೇ ಇದ್ದ ಅಥವಾ ಮೂರು ನಾಲ್ಕು ತಲೆಮಾರು ಹಿಂದೆ ಯಾರಿಗಾದರೂ ಇದ್ದು ಈಗಿನವರಿಗೆ ತಿಳಿಯದೇ ಇದ್ದ ಖಾಯಿಲೆಗಳು ಇಂತಹಾ ವಿವಾಹದಿಂದ ಹುಟ್ಟುವ ಮಕ್ಕಳಲ್ಲಿ ಪ್ರಕಟಗೊಳ್ಳಬಹುದು.

ಈಗಾಗಲೇ ಒಂದು ಮಗುವಿಗೆ ಅನುವಂಶಿಕ ಖಾಯಿಲೆ ಇದ್ದರೆ ಮುಂದೆ ಹುಟ್ಟುವ ಮಗುವಿಗೂ ಈ ಖಾಯಿಲೆ ಬರುವ ಸಾಧ್ಯತೆ ಎಷ್ಟಿದೆ ಎಂದು ತಂದೆ ತಾಯಂದಿರ ರಕ್ತದ ಮಾದರಿಯಲ್ಲಿ ಕ್ರೋಮೋಸೋಮುಗಳ ಅಧ್ಯಯನ ಮಾಡಿಸಿ ತಿಳಿದುಕೊಳ್ಳಬಹುದು. ಗರ್ಭದಲ್ಲಿರುವ ಮಗುವಿಗೂ ಇರಬಹುದಾದ ಕೆಲವು (ಎಲ್ಲವೂ ಅಲ್ಲ) ಅನುವಂಶಿಕ ಖಾಯಿಲೆಗಳನ್ನು ಕೂಡ ಪತ್ತೆಹಚ್ಚಲು ಸಾಧ್ಯವಿದೆ

ಕೆಲವು ಔಷಧಗಳು, ವೈರಸ್‌ಗಳು, ಮಾಲಿನ್ಯಕಾರಕ ವಸ್ತುಗಳು ಹಾಗೂ ವಿಕಿರಣಗಳು ನಮ್ಮ ಜೀನ್‌ನ ರಚನೆಯಲ್ಲಿ ಬದಲಾವಣೆ (mutation) ತರುವ ಸಾಧ್ಯತೆ ಇರುತ್ತದೆ. ಹಾಗಾಗಿ ಈ ಬಗ್ಗೆ ಮುಖ್ಯವಾಗಿ ಯುವಕ ಯುವತಿಯರು ಹಾಗೂ ಗರ್ಭಿಣಿಯರು ಜಾಗರೂಕರಾಗಿರಬೇಕು. ಮೂವತ್ತೈದು ವರ್ಷದ ನಂತರ ಮೊದಲ ಬಾರಿ ಗರ್ಭಧರಿಸುವ ತಾಯಂದಿರು ಡೌನ್ಸ್ ಸಿಂಡ್ರೋಮ್ ಎಂಬ ಖಾಯಿಲೆ ಇರುವ ಮಗುವಿಗೆ ಹಾಗೂ ಇನ್ನಿತರ ಕ್ರೋಮೋಸೋಮುಗಳ ವಿಕಲತೆ ಇರುವ ಮಗುವಿಗೆ ಜನ್ಮ ನೀಡುವ ಸಾಧ್ಯತೆ ಇರುತ್ತದೆ. ಈ ಖಾಯಿಲೆಗಳು ಇರುವುದನ್ನು ಕೆಲವು ತಪಾಸಣೆಗಳ ಮೂಲಕ ಭ್ರೂಣಾವಸ್ಥೆಯಲ್ಲೇ ಪತ್ತೆ ಹಚ್ಚಬಹುದು.

ದೋಷಪೂರಿತ ಜೀನ್‌ಗಳನ್ನು ಸರಿಪಡಿಸುವ ಚಿಕಿತ್ಸೆಯನ್ನು ಜೀನ್ ತೆರಪಿ (gene therapy) ಎಂದು ಕರೆಯುತ್ತಾರೆ. ಆದರೆ ಇದು ಇನ್ನೂ ಪ್ರಾಯೋಗಿಕ ಹಂತದಲ್ಲಿದೆ.

ಅದೃಷ್ಟವಶಾತ್ ಅನುವಂಶಿಕ ಖಾಯಿಲೆಗಳಲ್ಲಿ ಕ್ರೋಮೋಸೋಮ್‌ಗಳ ದೋಷಮಾತ್ರದಿಂದಾಗಿಯೇ ಬರುವ ಖಾಯಿಲೆಗಳ ಪಟ್ಟಿ ಸಣ್ಣದಿದೆ ಹಾಗೂ ಕ್ರೋಮೋಸೋಮುಗಳಲ್ಲಿ ದೋಷವಿದ್ದರೂ ನಾವು ಜೀವಿಸುವ ಪರಿಸರ ಹಾಗೂ ನಮ್ಮ ಹಿಡಿತದಲ್ಲಿರುವ ಇತರ ಕಾರಣಗಳ ಪ್ರಭಾವದಿಂದಾಗಿ ಖಾಯಿಲೆಯ ಚಿಹ್ನೆಗಳು ಪ್ರಕಟಗೊಳ್ಳುವ ಖಾಯಿಲೆಗಳ ಪಟ್ಟಿ ದೊಡ್ಡದಿದೆ . ಹಾಗಾಗಿ ನಮ್ಮ ಜೀನ್‌ಗಳಲ್ಲಿ ದೋಷವಿದ್ದರೂ ಹೆಚ್ಚಿನ ಖಾಯಿಲೆಗಳಲ್ಲಿ ಇತರ ಕಾರಣಗಳನ್ನು ಹತೋಟಿಯಲ್ಲಿಡುವ ಮೂಲಕ ಖಾಯಿಲೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬಹುದು.


ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322

# ಕಡಬ ತಲೇಕಿಯಲ್ಲಿ ಪ್ರತಿಷ್ಠಾ ವರ್ಧಂತಿ

ಕಡಬ ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನದಲ್ಲಿ ಫೆಬ್ರವರಿ 06ರಂದು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ 27ನೇಪ್ರತಿಷ್ಠಾ ವಾರ್ಷಿಕೋತ್ಸವವು ಜರಗಿತು. ಬೆಳಗ್ಗೆ ಗಣಪತಿ ಹವನ, ಶ್ರೀ ವಿಶ್ವನಾಥ ಸ್ವಾಮಿಗೆ ರುದ್ರಾಭಿಷೇಕ, ಶ್ರೀ ಶ್ರೀನಿವಾಸ ದೇವರಿಗೆ ನವಕಾಭಿಷೇಕ, ಪವಮಾನಾಭಿಷೇಕ, ಮಹಾಪೂಜೆ ಹಾಗೂ ರಾತ್ರಿ ರಂಗಪೂಜೆ ನೆರವೇರಿತು. ಸಂಜೆ ಭಜನೆ , ನೃತ್ಯ, ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮದ ಬಳಿಕ 75 ವರ್ಷ ಮೀರಿದ ಸಮಾಜದ ಹಿರಿಯರಾದ ತಲೇಕಿ ಲಲಿತಮ್ಮ, ತಲೇಕಿ ಮಹಾಲಕ್ಷ್ಮಿಅಮ್ಮ, ಕೋಲ್ವೆ ಸೌಭದ್ರಮ್ಮ , ಕೊಳಂದೂರು ಸತ್ಯವತಿಅಮ್ಮ ಮೊದಲಾದವರನ್ನು ಶಾಲು ,ಹಾರ, ಸೀರೆ, ಫಲಪುಷ್ಪಾದಿಗಳನ್ನು ನೀಡಿ ಸನ್ಮಾನಿಸಲಾಯಿತು. ಬಳಿಕ ರಾತ್ರಿ ಯಕ್ಷಗಾನ ಬಯಲಾಟ ಪ್ರದರ್ಶನಗೊಂಡಿತು. ಮಂಗಳೂರು ಪ್ರಮೋದ್ ಆಟೋಮೊಬೈಲ್ಸ್‌ನ ಮಾಲೀಕರಾದ ಶ್ರೀಮತಿ ಕನಕವಲ್ಲಿ ಮತ್ತು ಶ್ರೀ ಹರ್ಷಕುಮಾರ್ ಕೇದಗೆಯವರು ಈ ವಾರ್ಷಿಕೋತ್ಸವ ಕಾರ್ಯಕ್ರಮದ ಪ್ರಾಯೋಜಕರಾಗಿದ್ದರು.

ಬೆಂಗಳೂರಿನಲ್ಲಿ ಸಂಗೀತಾ ರಾವ್ ಮತ್ತು ವಿವೇಕ್ ರಾವ್ ವಿವಾಹ ಮಹೋತ್ಸವ

## ಸ್ಥಾನಿಕ ಬ್ರಾಹ್ಮಣ ಸಮಾಜದ ಬಂಧು ಬಾಂಧವರಿಗೆ ಮಾತಾಪಿತರ ಹೃದಯಾಂತರಾಳದ ಕೃತಜ್ಞತೆಗಳು



ತಾ. 29-11-2013ರಂದು ಬೆಂಗಳೂರಿನ ವಿಜಯ ನಗರದಲ್ಲಿರುವ **"ಬಂಟರ ಸಂಘ"** ಕಲ್ಯಾಣ ಮಂಟಪದಲ್ಲಿ ಬೆಂಗಳೂರಿನ ಶ್ರೀಮತಿ ಸಂಧ್ಯಾ-ಶ್ರೀ ಕರ್ವಾಲ್ ಶಂಕರ ನಾರಾಯಣ ರಾವ್‌ರವರ ಸುಪುತ್ರಿ ಚಿ।ಸೌ। ಸಂಗೀತಾ ಮತ್ತು ಶ್ರೀಮತಿ ಜಯಶ್ರೀ - ಶ್ರೀ ಶೆಡ್ಯ ಸುಧಾಕರ ರಾವ್‌ರವರ ಸುಪುತ್ರ ಚಿ। ವಿವೇಕ್ ರವರ ವೈವಾಹಿಕ ಮಹೋತ್ಸವವು ಗುರುಹಿರಿಯರ ಆಶೀರ್ವಾದದಿಂದ ಸಾಂಗವಾಗಿ ನೆರವೇರಿತು.

ವಧೂ ವರರ ಮತ್ತು ಅವರ ಮಾತಾಪಿತರ ಅಕ್ಕರೆಯ ಕರೆಯೋಲೆಗೆ ಸ್ಪಂದಿಸಿ ಮದುವೆಯ ಮಹೋತ್ಸವ ಮತ್ತು ಅದೇ ಸಂಜೆ ನಡೆದ ಔತಣ ಕೂಟಕ್ಕೆ (Reception) ಊರು ಪರವೂರಿನಿಂದ ಬಂಧು ಮಿತ್ರರು ಬಹು ಸಂಖ್ಯೆಯಲ್ಲಿ ಆಗಮಿಸಿ ನೂತನ ದಂಪತಿಗಳನ್ನು ಆಶೀರ್ವದಿಸಿದರು.

ಸಭೆಯನ್ನು ಚಂದಗಾಣಿಸಿ ಕೊಟ್ಟು ಶುಭಹಾರೈಸಿದ ಮಿತ್ರರಿಗೆ ಮತ್ತು ಸ್ಥಾನಿಕ ಬ್ರಾಹ್ಮಣ ಸಮಾಜದ ಸಮಸ್ತ ಬಂಧುಗಳಿಗೆ ಮಾತಾಪಿತರಾದ ಶ್ರೀಯುತ ಕರ್ವಾಲ್ ಶಂಕರನಾರಾಯಣ ರಾವ್ ದಂಪತಿಗಳು ಮತ್ತು ಶ್ರೀಯುತ ಶೆಡ್ಯ ಸುಧಾಕರ ರಾವ್ ದಂಪತಿಗಳು ತುಂಬಾ ಆಭಾರಿಯಾಗಿದ್ದಾರೆ ಮತ್ತು ಕೃತಜ್ಞತೆಗಳನ್ನು ಈ ಮೂಲಕ ವ್ಯಕ್ತ ಪಡಿಸಿದ್ದಾರೆ.

### ಸ್ಥಾನಿಕ ಬ್ರಾಹ್ಮಣ ಸಮಾಜದ ಬೆನ್ನು ತಟ್ಟಿದ ಬಂಟರ ಸಂಘ

ತಾ.29-11-2013ರಂದು ಬಂಟರ ಸಂಘದಲ್ಲಿ ನಡೆದ ಮದುವೆಯ ದಿನದ ಎರಡೂ ಸಮಾರಂಭಗಳಲ್ಲಿ ಸ್ಥಾನಿಕ ಬ್ರಾಹ್ಮಣ ಸಮಾಜದ ಬಂಧು ಬಾಂಧವರು ಕಲ್ಯಾಣ ಮಂಟಪದಲ್ಲಿ ಬಹಳ ಶಿಸ್ತಿನಿಂದ ಭಾಗವಹಿಸಿರುವುದು ಬಂಟರ ಸಂಘದ ಪದಾಧಿಕಾರಿಗಳ ಗಮನ ಸೆಳೆದಿದ್ದು ಅವರು ನಮ್ಮ ಸಮಾಜವನ್ನು ಮುಕ್ತ ಕಂಠದಿಂದ ಹೊಗಳಿರುವುದನ್ನು ಇಲ್ಲಿ ಪ್ರಸ್ತಾಪಿಸಲು ಸಂತೋಷವಾಗುತ್ತದೆ. ಬಂಟರ ಸಂಘ ಕಲ್ಯಾಣ ಮಂಟಪದ ನಿಯಾಮಾವಳಿಗೆ ಸ್ವಲ್ಪವೂ ಧಕ್ಕೆ ಬಾರದಂತೆ ಶಿಸ್ತು ಪಾಲಿಸಿದ ನಮ್ಮ ಸಮಾಜದ ಬಂಧುಗಳಿಗೆ ಧನ್ಯವಾದಗಳು.

ಶಂಕರನಾರಾಯಣರಾವ್ ಕರ್ವಾಲ್.
ಸಂಧ್ಯಾ ಎಸ್ ರಾವ್.
ಸುದರ್ಶನ ರಾವ್ ಕರ್ವಾಲ್.


## ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ


ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

| | |
|---|---|
| #1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010 | ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ |

ಮೊಬೈಲ್- 9886629697, 9986119865

## ದೇವಿಕೃಪಾ ಏಜೆನ್ಸೀಸ್, ನಂದಿಕೂರು



ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

Celebrations
Conference & Party Hall (Air Conditioned)

HALL AVAILABLE FOR BIRTHDAYS, CONFERENCES, CORPORATE MEETINGS, CLUB MEETINGS & OTHER FUNCTIONS.



FOR BOOKINGS CONTACT
ANUGRAHA BUILDING, UDUPI - MANIPAL ROAD, LAXMINDRA NAGAR, KUNJIBETTU POST, UDUPI - 576 102. Mob.: 9632099439
Prop. : ADARSH RAO




## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

ಕುಂಜಿಬೆಟ್ಟು, ಉಡುಪಿ - 2.
ನಮ್ಮ ಸಂಘದ ಆಶ್ರಯದಲ್ಲಿ

**ಶ್ರೀ ಶಂಕರ ಜಯಂತಿ ಆಚರಣೆಯು**

ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದಲ್ಲಿ
ತಾ.04-05-2014 ಆದಿತ್ಯವಾರ ನೆರವೇರಲಿದೆ.

ಆ ಪ್ರಯುಕ್ತ ಅದೇ ದಿನ ಬೆಳಿಗ್ಗೆ **ಸಾಮೂಹಿಕ ಉಪನಯನ**ವು ನಡೆಯಲಿದೆ.

ಸರ್ವರಿಗೂ ಆದರದ ಸ್ವಾಗತ : - ಕಾರ್ಯದರ್ಶಿ

ಸಾಮೂಹಿಕ ಉಪನಯನದಲ್ಲಿ ಪಾಲ್ಗೊಳ್ಳಲಿರುವ ಆಸಕ್ತ ಸಮಾಜ ಬಾಂಧವರು ವಟುಗಳ ವಿವರಗಳನ್ನು ತಾ.25-04-2014ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್/ಕಾರ್ಯದರ್ಶಿಯವರಿಗೆ ತಿಳಿಸಲು ವಿನಂತಿಸಲಾಗಿದೆ.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ

ಪ್ರಿಯರೇ,

ಸ್ವಸ್ತಿ ಶ್ರೀ ಚಾಂದ್ರ ಜಯ ನಾಮ ಸಂ।ರದ ಚೈತ್ರ ಶುಕ್ಲ ಮೀನ ಮಾಸ
ತಾ.31-03-2014ರಿಂದ ತಾ.08-04-2014ರ ವರೆಗೆ

**ಕಿರುನವರಾತ್ರಿ ಮಹೋತ್ಸವವು** ಜರಗಲಿರುವುದು.

ತಮಗೆಲ್ಲರಿಗೂ ಆದರದ ಸ್ವಾಗತ -ಕಾರ್ಯದರ್ಶಿ




ಎಮ್. ದೇವಾನಂದ್ ಭಟ್ Cell : 9845644556, 9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

ತಂತ್ರಾಡಿ ವಿಶ್ವನಾಥ ಶಾನುಭೋಗ್ ☎ 94487 24161, 97417 85551

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

Harikrishna Digitals

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ - 576 102

**Buying and selling shares as easy as checking your emails**

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org